ರಹಸ್ಯ

[ಸಾಮಾಜಿಕ ನಾಟಕ]

—ಜಿ. ಸದಾಶಿವಯ್ಯ,
ದೇಶೀಯ ವಿದ್ಯಾಶಾಲೆ, ಬೆಂಗಳೂರು ೪.

ಪ್ರಕಾಶಕರು :

ಆನಂದ್ ಬ್ರದರ್ಸ್–ಬೆಂಗಳೂರು, ೨.

1950

ಬೆಲೆ : ೦-೧೨-೦

ಮುದ್ರಕರು :

ಬಿ. ಎಂ. ಬೈರಪ್ಪ

ಶ್ರೀ ಯೋಗಿನಾಥ್ ಪ್ರಿಂಟಿಂಗ್ ವರ್ಕ್ಸ್.

146/3 ೨ನೇ ಬೀದಿ, ಚಾಮರಾಜಪೇಟೆ, ಬೆಂಗಳೂರು ೨.

ಪಾತ್ರ-ವಿವರ

೧. **ಲಕ್ಷ್ಮೀಪತಿರಾಯ**—ನಲವತ್ತೈದು ವರುಷದ ಜಮೀನ್‌ದಾರ. ಯೌವನದಲ್ಲಿ ಲೀಲಾಜಾಲವಾಗಿ ಲಾಲಸೆಯಲ್ಲಿ ಲೋಲನಾಗಿದ್ದವನಾದರೂ, ಈಗ ಬಹು ಗೌರವದಿಂದಲೂ ದರ್ಪದಿಂದಲೂ ಊರಿನಲ್ಲಿ ಬಾಳುತ್ತಿರುವವನು.

೨. **ರಾಜಲಕ್ಷಮ್ಮ**— ಲಕ್ಷ್ಮೀಪತಿರಾಯನ ಮೂವತ್ತೆಂಟುವರುಷ ವಯಸ್ಸಿನ ಹೆಂಡತಿ. ಅನಂತವಾದ ಸುಖಭೋಗಗಳ ಆಸಿಷ್ಟ ನಿವೃತ್ತಿಯಿಂದ ಉಂಟಾದ ದೇಹಾಲಸ್ಯದಿಂದ ಹತ್ತಾರು ವರುಷಗಳಿಂದ ನರಳುತ್ತಿರುವವಳು. ಧರ್ಮಭೀರು

೩. **ರಾಜಕುಮಾರ**—ರಾಯರ ಮತ್ತು ಪತ್ನಿ ರಾಜಲಕ್ಷ್ಮಮ್ಮನವರ ಹದಿನೆಂಟು ವಯಸ್ಸಿನ ಒಬ್ಬನೇ ಪುತ್ರ. ಭೋಗ ವಿಲಾಸಾಸಕ್ತ, ಯೌವನ ಮದ ಮತ್ತು ಧನಮದದಿಂದ ಕೊಬ್ಬಿದ ಸ್ವಾರ್ಥಿ. ಪಶುಬುದ್ಧಿಯವನು

೪ **ವಸಂತಕುಮಾರ**—ಲಕ್ಷ್ಮೀಪತಿರಾಯರ ಯೌವನದ ಪ್ರೇಮಿಕಾ ಗಣಿಕೆಯ ಇಪ್ಪತ್ತುವರುಷದ ಕುಮಾರ ರಾಯರ ಪ್ರಾಣಪದಕ. ವಿಶ್ವಪ್ರೇಮಿ.

೫. **ಮಂಜ**—ಐವತ್ತು ವಯಸ್ಸಿನ ರಾಯರ ಬಾಲ್ಯ ಸೇವಕ. ವಸಂತನ ತಾಯಿತಂದೆ ಮತ್ತು ರಕ್ಷಕ ಸ್ಥಾನದಲ್ಲಿರುವವನು ಪ್ರೇಮಮೂರ್ತಿ.

೬. **ಕಾಶಿ**—ಮೂವತ್ತೈದು ವರ್ಷ ವಯಸ್ಸಿನ ಅಡುಗೆಯವನು. ರಾಯರ ಮನೆಗೆ ಹದಿನೈದು ವರ್ಷದ ಹಳಬ, ನೀಚವೃತ್ತಿಯ ಸಣ್ಣ ಮನಸ್ಸಿನ ಹೇಡಿ.

೭. **ಬೆಟ್ಟಯ್ಯ**— ಪಟ್ಟಣದ ಹೊಲಗೇರಿಯ ಮುಖಂಡ. ಮೃದು ಸ್ವಭಾವದವನು.

೯-೫-೧೯೩೬ರಲ್ಲಿ ಮೊದಲು ಈ ನಾಟಕವನ್ನು ದೇಶೀಯ ವಿದ್ಯಾಶಾಲೆಯಲ್ಲಿ ಅಭಿನಯಿಸಿದಾಗ ಪಾತ್ರವಹಿಸಿದವರು

೧	ಲಕ್ಷ್ಮೀಪತಿರಾಯ	ಶ್ರೀಮಾನ್	ಸಿ. ಕೆ. ನಾಗರಾಜರಾವ್
೨	ರಾಜಲಕ್ಷ್ಮಮ್ಮ	,,	ಪಿ. ಎಸ್ ಸುಬ್ಬಣ್ಣ
೩	ರಾಜಕುಮಾರ	,,	ವಿಶ್ವನಾಥ್ ಜಿಂಗಾಡೆ
೪	ವಸಂತಕುಮಾರ	,,	ಚಿ. ಸದಾಶಿವಯ್ಯ
೫	ಮಂಜ	,,	ಡಿ. ಕೆ. ಸುಬ್ಬರಾವ್
೬	ಕಾಶಿ	,,	ಎಂ ಆರ್. ರಾಮಣ್ಣ
೭	ಬೆಟ್ಟಯ್ಯ	,,	ಆರ್. ಕೆ. ಗೋಡ್ಬೋಲೆ.

ಬೆಂಗಳೂರು

ಅಮೆಚೂರ್ ನಾಟಕ ಮಂಡಲಿಯ ಸಮಸ್ತ ಗೆಳೆಯರಿಗೆ
ಅವರೊಂದಿಗೆ ಕಳೆದ ನಾಲ್ಕಾರು ವರುಷಗಳ
ಸವಿ ನೆನಪಿಗಾಗಿ
ಈ ನಾಟಕ ಕಾಣಿಕೆಯಾಗಿದೆ.

—**ಸದಾಶಿವ**

ಒಂದನೆಯ ಪ್ರವೇಶ

[ರಾಯರ ಮಹಾಲಿನ ನಡುಮನೆ. ಅನೇಕ ಚಿತ್ರಗಳಿಂದ ಸುಸಜ್ಜಿತವಾದ ಗೋಡೆಗಳು. ಎದುರುಗಡೆ ಮತ್ತು ಬಲಗಡೆ ಕಾಣುವ ಬಾಗಿಲುಗಳ ಮುಂದೆ ಮಣಿಗಳ ತೋರಣಗಳು ತೂಗಾಡುತ್ತಿವೆ. ನಡುಮನೆಯ ಮಧ್ಯಭಾಗವಲ್ಲಿ ಒಂದು ಗುಂಡು ಮೇಜು, ಸುತ್ತಲೂ ಐದು ಕುರ್ಚಿಗಳು. ಇತ್ತ ಬಲಬಾಗಿಲಿನ ಪಕ್ಕದಲಿ ಒಂದು ಸೋಫಾ. ಎದುರು ಬಾಗಿಲ ಎಡ ಪಕ್ಕದಲ್ಲಿ ಒಂದು ಮಂಚ. ಅದರ ಮೇಲೆ ಹಾಸಿದ ಸುಪ್ಪತ್ತಿಗೆ. ಮೇಜನ್ನೊರಗಿಕೊಂಡು ಖಾದಿ ಧೋತಿ, ಕುಡುತ, ಉತ್ತರೀಯಗಳನ್ನುಟ್ಟ ಇಪ್ಪತ್ತು ವರುಷದ ಸುಂದರಯುವಕನಾದ ವಸಂತಕುಮಾರನು ನಿಂತಿರುವನು, ಮುಖದಲ್ಲಿ ಬೇಡಿಕೆಯ ಮುದ್ರೆ. ಮಂಚದ ಬಳಿ ಮೂವತ್ತೈದು ವರ್ಷದ ಕಾಶಿ ನಿಂತಿರುವನು. ಮುಖದಲ್ಲಿ ಕೆಣಕಲ್ಪಟ್ಟ ಕೋಪ. ಸೋಫಾದ ಬಳಿ ವೃದ್ಧ ಮಂಜನು ನಿಂತಿರುವನು. ಮುಖದಲ್ಲಿ ಅಶಾಂತಿ.]

ಕಾಶಿ—ಸಾಕು ಸ್ವಾಮೀ ನಿಮ್ಮೀ ವೇದಾಂತ.

(ಹೊರಡಲಿರುವನು)

ವಸಂತ—(ಮುಂದೆ ಬಂದು ಅವನ ಕೈಹಿಡಿದು) ಕಾಶೀ! ನೀನೂ ಈ ರೀತಿ ನಿರ್ದಯನಾಗಿ, ನ್ಯಾಯ—ಅನ್ಯಾಯಾನ ವಿಮರ್ಶೆ ಮಾಡದೆ, ಹಟ ಹಿಡಿದರೆ ನನ್ನ ಕೆಲಸಕ್ಕೆ ಎಷ್ಟು ಭಂಗ ಬರುತ್ತೆ!

ಕಾಶಿ—ಅಲ್ಲಾ ಸ್ವಾಮೀ! ಸತ್ತಹಸೂನ ಕಿತ್ತು ತಿನ್ನೋನಿಗೂ, ಋಷಿ ವಂಶದಲ್ಲಿ ಹುಟ್ಟಿರೋ ಬ್ರಾಹ್ಮಣನಿಗೂ ಭೇದಾನೇ ಇಲ್ಲಾಂದ್ರೆ, ಇದು ಯಾರಾದರೂ ಬುದ್ಧಿವಂತರಾಡೋ ಮಾತೇ? ಅಮೃತ ಹೆಂಡ ಎರಡೂ ಒಂದೇಯೇ?

ವಸಂತ—ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿಹಸ್ತಿನಿ। ಶುನಿ ಚೈವ ಶ್ವಪಾಕೇಚ ಪಂಡಿತಾಸ್ಸಮದರ್ಶಿನಃ—ಅಂತ ಕೃಷ್ಣ ಹೇಳಿಲ್ಲವೆ? ಪಂಡಿತನಾದವನಿಗೆ, ತಿಳಿದವನಿಗೆ, ವಿದ್ಯಾವಿನಯಸಂಪನ್ನನಲ್ಲಿಯೂ, ಬ್ರಾಹ್ಮಣನಲ್ಲಿಯೂ, ಹಸುವನ್ನು ವಧಿಸುವ ಕಟುಕನಲ್ಲಿಯೂ, ನಾಯಿಯಲ್ಲಿಯೂ, ನಾಯಿಯನ್ನ ಬೇಯಿಸಿ ತಿನ್ನೊ ಚಂಡಾಲನಲ್ಲಿಯೂ ಯಾವ ಭೇದವೂ ಕಾಣೋದಿಲ್ಲಾಂತ.

ಕಾಶಿ—ಹಾಗಾದರೆ ಈ ಮಂಜನಿಗೂ ನನಗೂ ಯಾವ ವ್ಯತ್ಯಾಸವೂ ಇಲ್ಲಾಂತಲೇ ನಿಮ್ಮ ಅಭಿಪ್ರಾಯ ?

ವಸಂತ—ಯಾವ ವಿಚಾರದಲ್ಲಿ ವ್ಯತ್ಯಾಸ ಕಾಶೀ? ಈ ಶರೀರದ ಹುಟ್ಟಿನಲ್ಲಿ ತಾನೇ ! ಕೇಳೂ. ಜೋ ಜಾರೆ ತನಹೋಯ್ ಭಸ್ಮ ಧುರೀ | ಗಾಡೆ ಕ್ರಿಮಿಕೀಟ ಖಾಈ | ಸೀಕರ ಸ್ವಾನ ಕಾಗಕಾ ಭೋಜನ | ತನಕಿ ಇಹೈಬಡಾಈ || ಅಂತ ಕಬೀರ್ ಹೇಳಿರೋ ಹಾಗೆ ಸುಟ್ಟರೆ ಒಂದು ಹಿಡಿ ಬೂದಿಯಾಗುತ್ತೆ ; ಹೂತರೆ ಕ್ರಿಮಿಕೀಟಗಳಿಂದ ತಿನ್ನಲ್ಪಟ್ಟು ಒಂದು ಹಿಡಿ ಮಣ್ಣಾಗುತ್ತೆ ; ಇಂಥ ಶರೀರದ ಹುಟ್ಟಿನಲ್ಲಿ ಭೇದವಿದ್ದರೆ

ಕಾಶಿ—(ಕಿಡಿಯಾಗಿ) ಸಾಕು ಸ್ವಾಮೀ ನಿಮ್ಮ ವೇದಾಂತ; ಮುಚ್ಚಿಡಿ. ನಿಮ್ಮಂಥಾವರಿಂದಲೇ ಇಂಥ ಮನೆಗಳು ಹಾಳಾಗೋದು. ನೀವು ನಿಮ್ಮ ಹುಟ್ಟಿಗೆ ತಕ್ಕಂತೆ

ಮಂಜ—(ರೇಗಿ ಗಟ್ಟಿಯಾಗಿ) ಕಾಶೀeee ! (ಮುಂದೆ ನುಗ್ಗುವನು. ವಸಂತನು ಮುಂದೆ ಬಂದು ತಡೆಯುವನು. ಮುಖದಲ್ಲಿ ಭ್ರಾಂತಿ. ಕಾಶಿ ಯು ದುರುಗುಟ್ಟಿಕೊಂಡು ನೋಡುತ್ತಾ, ಎದುರು ಬಾಗಿಲಿನಿಂದ ಒಳಕ್ಕೆ ಹೊರಟು ಹೋಗುವನು).

[ವಸಂತನು ಪೆಟ್ಟುತಿಂದವನಂತೆ ಕುರ್ಚಿಯ ಮೇಲೆ ಕುಕ್ಕರಿಸಿ, ಗಲ್ಲಕ್ಕೆ ಕೈಯೂರಿ, ಭ್ರಾಂತನಾಗಿ ಯೋಚಿಸುತ್ತಿರುವನು.]

ಮಂಜ—(ಸಮಾಧಾನ ಪಡಿಸುವ ಧ್ವನಿಯಲ್ಲಿ) ಬುದ್ಧೀ !

ವಸಂತ—(ನಿಧಾನಿಸಿ, ಇತ್ತ ತಿರುಗದೆ) ಕೆಲವು ದಿನಗಳಿಂದೀಚೆಗೆ ಕಾಶಿ ಮಾತುಮಾತಿಗೂ ನನ್ನ ಹುಟ್ಟನ್ನೇ ಎತ್ತಿ ರೇಗಿ ಬೈಯುತಾನೆ.... ಏತಕ್ಕೆ ? ... ನಾನು ಹೀಗೆ ಹಣವಂತರ ಮನೇಲಿ ಹುಟ್ಟಿ, ಕಾಶಿ ಬಡವನಾಗಿ ಇಲ್ಲಿ ಅಡುಗೆಗೆ ಸೇರಿದಾನೇಂತಲೇ ? .. ಇಲ್ಲಾ

ಮಂಜ—(ಹತ್ತಿರ ಬಂದು) ಅವನ ಮಾತು ಮರೆತುಬಿಡಿ ಬುದ್ಧೀ ! ಇನ್ನು ಮುಂದೆ ಇಂತಾ ಮಾತೇನಿದ್ದರೂ ನನ್ನ ಕೂಡ ಏಳಿ. ಅವನಿಂದ ನಿಮ್ಮ ಕೆಲಸಕ್ಕೆ ಯಾವ ತರದ್ದೂ ತೊಂದರೆ ಬರದಂಗೆ ನಾನು ನೋಡಿ ಕೋತೀನಿ.

ವಸಂತ—(ಅವನ ಕೈಹಿಡಿದೆದ್ದು) ಮಂಜಾ ! (ಎಲ್ಲೋ ನೆಟ್ಟ

ನೋಟದಿಂದ) ನಾನು ಇಷ್ಟು ಹಣವಂತರ ಮನೇಲಿ ಹುಟ್ಟಿ ಬೆಳದಿದ್ದರೂ ನನ್ನ ಕನಸುಮನಸುಗಳಲ್ಲೆಲ್ಲಾ ಪ್ರಪಂಚದ ಬಡತನವೇ ತುಂಬಿದೆ, (ಮಂಜನಕಡೆ ನಿಧಾನವಾಗಿ ತಿರುಗಿ) ನನ್ನನು ಹೆತ್ತ ತಾಯಿಗಿಂತ ಹೆಚ್ಚಾಗಿ ಪ್ರೀತಿಸೋನು ನೀನೇ ಮಂಜ! ಆದರೆ.. (ಗಲ್ಲಕ್ಕೆ ಕೈ ಕೊಟ್ಟು ನೆಲವನ್ನೇ ನೋಡುತ್ತಾ) ಮುಂಚಿನಿಂದಲೂ, ನನ್ನ ತಮ್ಮ ರಾಜ ಕುಮಾರ ಮತ್ತು ಬಾಲ್ಯದಿಂದಲೂ ನನಗೆ ಅನ್ನ ಹಾಕುತಿರೋ ಕಾಶಿ ಇವರಿಬ್ಬರು ಮಾತ್ರ ನನ್ನಲ್ಲಿ ಯಾಕೋ ನಿರ್ದಯರಾಗಿಯೇ ಉಳಿದು ಬಿಟ್ಟಿದ್ದಾರೆ ನಾನು ಅವರಲ್ಲಿ ಎಷ್ಟು ಪ್ರೇಮ ದೈನ್ಯಗಳಿಂದ ವರ್ತಿಸಿದರೂ ಕೂಡ ವ್ಯರ್ಥವಾಗಿದೆ........ಇಷ್ಟಕ್ಕೆ ನಾನು ಮಾಡಿರೋ ಅಪರಾಧವಾದರೂ ಏನೂ? (ಯೋಚಿಸುವನು)-

ಮಂಜ—(ಎದುರು ಬಾಗಿಲ ಕಡೆ ನೋಡಿ) ಅಮ್ಮಾವರು ಬಂದರು. (ಆ ಬಾಗಿಲಿನಿಂದ ಅಸ್ವಸ್ಥತೆಯಲ್ಲಿರುವ ಮೂವತ್ತೆಂಟು ವಯಸ್ಸಿನ ರಾಜಮ್ಮನು ಮಂಚದ ಕಡೆಗೆ ಮೆಲ್ಲಗೆ ಹೆಜ್ಜೆಯಿಡುತ್ತಾ ಬರುತ್ತಿರುವಳು ಮುಖದಲ್ಲಿ ಏನನ್ನೂ ಒಲ್ಲದ ಜಿಗುಪ್ಸಾ ಮುದ್ರೆ. ವಸಂತನು ತಟ್ಟನೆದ್ದು ಹೋಗಿ ಆಕೆಯ ಕೈಗಳನ್ನು ಹಿಡಿದು ನಡೆಸಿಕೊಂಡು ಬಂದು ಮಂಚದ ಮೇಲೆ ಕೂಡಿಸುವನು).

ವಸಂತ—(ಆಕೆಯ ಪಾದಗಳನ್ನು ತನ್ನ ಉತ್ತರೀಯದ ಸೆರಗಿನಿಂದ ಒರೆಸುತ್ತಾ) ಅಮ್ಮಾ! ತಲೆನೋವು ಕಮ್ಮಿಯಾಯಿತೇ?

ರಾಜಮ್ಮ—(ಅಲಕ್ಷ್ಯದಿಂದ) ಇಲ್ಲಾ ಮಗೂ!

ವಸಂತ—(ಪಾದದ ಬಳಿಯೇ ಕುಳಿತು ಪ್ರೇಮದೃಷ್ಟಿಯಿಂದ) ದೇವರು ನಮಗೆ ಇಷ್ಟು ಐಶ್ವರ್ಯ ಕೊಡೋದರ ಬದಲು, ಮುಂಚಿನಿಂದಲೂ ನಿನಗೆ ಪೂರ್ಣಾರೋಗ್ಯ ಮಾತ್ರ ಕೊಟ್ಟುಬಿಟ್ಟಿದ್ದರೆ, ನಾನೆಲ್ಲಾದರೂ ದುಡಿದು ಹಣ ತಂದು ನಿನ್ನ ಸೇವೆಮಾಡುತಿದ್ದೆ. ನಮ್ಮ ವಿಚಾರದಲ್ಲಿ ದೇವರಿಗೆ ಯಾಕಿಷ್ಟು ನಿರ್ದಯ?

ರಾಜಮ್ಮ—ಮನೇಲಿರೋರ ಪಾಪಪುಣ್ಯಗಳ ಫಲದಿಂದ........

ವಸಂತ—(ಕುತೂಹಲದಿಂದ) ಅಂದರೆ?

ರಾಜಮ್ಮ—ಅಂದರೇ?

(ಇದ್ದಕ್ಕಿದ್ದಂತೆಯೇ ಮಂಜನು ' ಅಯ್ಯೋ! ಅಯ್ಯೊ ! ' ಎನ್ನುತ್ತಾ ನೆಲಕ್ಕುರುಳುವನು.)

ವಸಂತ—(ಓಡಿಬಂದು ಅವನನ್ನೊರಗಿಸಿ ಕೂಡಿಸಿಕೊಂಡು) ಏನಾಯಿತು ಮಂಜ ?

ಮಂಜ—ಇದ್ದಕಿದ್ದಂಗೆ ಎದೆ ಬತ್ತುತು. ಒಸೀ ಅಂಗೇ ಕೈಯಿಡಿದು ನಡೆಸಿ ದೇವರೇ. ಒರಗಡೆ ಗಾಳಿಗೆ ಕರಕೊಂಡೋಗಿ ಬುದ್ಧೀ!

ವಸಂತ—(ಕೈಡಿದು ನಡೆಸಿಕೊಂಡು ಹೋಗುತ್ತಾ) ಬಾ ! ಹೊರಗಡೆ ತೋಟದಲ್ಲಿ ಕೂತುಕೋ. ಒಂದು ಲೋಟ ಪಾನಕ ತಂದು ಕುಡಿಸುತೇನೆ. ಎಲ್ಲಾ ಸರಿಹೋಗುತ್ತೆ.

ಮಂಜ—ಔದೂ ಬುದ್ದೀ !

(ನಿಷ್ಕ್ರಮಿಸುವರು)

ರಾಜಮ್ಮ—(ಅತ್ತಕಡೆಯೇ ನೋಡುತ್ತಿದ್ದು) ಆಳುಕಾಳುಗಳಲ್ಲಿ ಭೇದಾನೇ ತಿಳೀದ ಕಾಡುಪಾಪ! ಇಪ್ಪತ್ತು ವರುಷಗಳಿಂದ ಸಹಿಸಿ ಸಹಿಸಿ ನನಗೆ ಸಾಕಾಯಿತು.

ಮಂಜ—(ಕ್ಷಣ ಕಾಲಾನಂತರ ತಟ್ಟನೆ ಒಳಕ್ಕೆ ಬಂದು) ತಾಯಿಾ! ಮನ್ನಿಸಬೇಕು. ರವಷ್ಟೊತ್ತಿಗೆ ಮುಂಚೆ ಕಾಸ್ತ್ಯೆಯನೋರು ರೇಗಿ ಏನೋ ಅನ್ನೋಕೋಗಿದ್ದರು. ತಮ್ಮ ಮಾತೂ ಅಂಗೇ ಕಾಣಸ್ತು. ಅದಕೋಸ್ಕರ ಇಂಗ್ಮಾಡಿದೆ. ಮನ್ನಿಸಿ! ಅವ್ವಾ! ನನಗೋಸ್ಕರ ನನ್ನ ಜೀವ ಇರೋ ಕಂಟಾನಾದ್ರೂ ಈ ದೇವರನ ಕಾಡಿಗೆ ತಳ್ಳಬೇಡಿ. ನಾನು ಸಾಯೋ ಕಾಲಕ್ಕೆ ನಾನೇ ಎಲ್ಲಾ ಸರಿ ಮಾಡಿ ...

ರಾಜಮ್ಮ—(ರೇಗಿ) ಹೊರಡೋ ತಲೆಹರ್ಕಟಿ! ಹಾಗಿದ್ದಿದ್ದರೆ ಇದು ಇಪ್ಪತ್ತು ವರುಷದ ಹಿಂದಿನ ಮಾತಾಗುತಿತ್ತು....ಹಾಂ! ಎಲ್ಲಿ ಹೋದ ಈಗ ?

ಮಂಜ—ಸೋಡ ಬೇಕೂಂತ ಸುಳ್ಳೇಳ್ದಿ! ತಾವೇ ಪೇಟೆಗೋಡಿದರು. ನಾನಿತ್ತ ಎದ್ದುಬಂದೆ. ತಿರಿಗೋಗಿ ಕುಂತ್ರತೀನಿ. ಅವ್ವಾ! ನನ್ನ ಮೇಗೇ ಅಲ್ಲ, ಪ್ರಪಂಚದಾಗಿನ ಜನರಮೇಗೆಲ್ಲಾ ಎಷ್ಟು ಪಿರೀತೀ ನ್ರವ್ವ ಆ ನನ್ನ ದೇವರಿಗೆ! ನಿಮ್ಮನ್ನ ಕಂಡ್ರಂತೂ ರಾಮುಂಗೆ ಕೌಸಲ್ಯೆ ಕಂಡಂಗೆ........

ರಾಜಮ್ಮ– (ತಿರಸ್ಕಾರದಿಂದ) ಸಾಕು ನಿನ್ನ ಪುರಾಣ, ನಮ್ಮ ರಾಜ ಯಾಕಿಷ್ಟೊ ಹೊತ್ತಾದರೂ ಮನೆಗೆ ಬರಲ್ಲಿಲ್ಲ? ಸ್ವಲ್ಪ ಹೋಗಿ ನೋಡು.

(ಮಂಜನು ಕತ್ತನ್ನು ತಗ್ಗಿಸಿ ಹೊರಡುವನು)

ರಾಜಮ್ಮ—(ಕ್ಷಣ ಕಾಲಾನಂತರ ಅತ್ತ ತಿರುಗಿ) ಕಾಶಿ! ಕಾಶೀ!

ಕಾಶಿ—(ಒಳಗಿನಿಂದ ಪ್ರವೇಶಿಸಿ) ಅಮ್ಮಾ!

ರಾಜಮ್ಮ—ವಸಂತನನ್ನ ನೀನೇನಂದೇ?

ಕಾಶಿ—(ಬೆವರಿ) ಏನೂ ಇಲ್ಲಾಮ್ಮಾ! ಅವರು ಹೊಲಗೇರೀಲಿ ..

(ಸುಮ್ಮನಾಗುವನು)

ರಾಜಮ್ಮ—(ರೇಗಿ) ಏನು ಹೊಲಗೇರೀಲಿ?

ಕಾಶಿ—ಏನೂ ಇಲ್ಲಾಮ್ಮಾ! ಅವರು ಈವತ್ತು ನನಗೂ ಮಂಜನಿಗೂ ವ್ಯತ್ಯಾಸವಿಲ್ಲ, ಇಬ್ಬರೂ ಒಂದೇ ಅಂದರು. ಹೊಲೇರೂ ಬ್ರಾಹ್ಮಣರೂ....

ರಾಜಮ್ಮ—ಸಾಕು ನಿನ್ನ ಪುರಾಣ! ಕೇಳಿ ಕೇಳಿ ತಲೆನೋವು ಹೆಚ್ಚುತಾ ಇದೆ. (ಸ್ಥಿರ ಧ್ವನಿಯಲ್ಲಿ) ನೋಡು ಕಾಶೀ! ರಹಸ್ಯದ ವಿಚಾರವೇನಾದರೂ ಯಾವುದಾದರೂ ಬಗೆಯಲ್ಲಿ ನಾವು ನಾಲ್ಕು ಜನರು ಹೊರತು ಐದನೇಯನರ ಕಿವಿಗೆ ಬಿದ್ದ ದಿನ ನಿನ್ನ ಆಯುಸ್ಸು ತೀರಿದಂತೆ.

ಕಾಶಿ—(ನಂಬಿಕೆಯನ್ನು ಹುಟ್ಟಿಸುವ ಧ್ವನಿಯಲ್ಲಿ ಒತ್ತಿ) ಇಲ್ಲಾಮ್ಮಾ! ದೇವರಾಣೆಗೂ ಇಲ್ಲ.

ರಾಜಮ್ಮ—(ಕ್ಷಣಕಾಲ ಯೋಚಿಸಿ ತಟ್ಟನೆ ಕತ್ತೆತ್ತಿ) ಅಲ್ಲವೋ ಕಾಶೀ, ನಮ್ಮೆಲ್ಲರವಿಚಾರದಲ್ಲೂ ಆ ಹುಡುಗನ ಪ್ರೇಮ ನೋಡಿದೆಯೋನೋ! ನಿನ್ನನ್ನಷ್ಟು ಪ್ರೀತಿಯಿಂದ ಮಾತಾಡಿಸಬೇಕೂಂತ ಅವನಿಗೇನೋ ದರದು? ಬೇಕಾದರೆ ನಿನ್ನ ಬುರುಡೆ ಹಾರಿಸಲಾರನೆ?

ಕಾಶಿ— ಹೌದಮ್ಮಾ.

ರಾಜಮ್ಮ—ಅವನು ಹೊಲಗೇರಿಗೆ ಹೋಗಿಬರ್ತಾನೆ. ಅಲ್ಲಿ ಖಾಯಿಲೆಯೋರಿಗೆ ಗಂಜಿ ಹಾಕುತಾನೆ. ಅವರನ್ನೆಲ್ಲಾ ಮುಟ್ಟಿ ಬರ್ತಾನೆ. ಅವನಿಗೆ ಹಾಗೇ ಬಡಿಸಿದರೆ ನಿನ್ನ ಜಾತಿ ಹೋಗುತ್ತೇಂತ ನೀನು ಅಂದರೆ, ತಕ್ಷಣಾನೆ ಸ್ನಾನಮಾಡಿ ಬೇರೆ ಬಟ್ಟೆ ಹಾಕಿಕೊಂಡು ಬಂದ! ಅವತ್ತಿಂದ

ಹಾಗೇ ಮಾಡುತಾ ಇದಾನೆ! ನಮ್ಮ ರಾಜನ ಹಾಗೆ ಹಟವಾದಿಯಾಗಿದ್ದರೆ, ಆಕ್ಷಣಾನೇ ನಿನ್ನ ಮನೆಯಿಂದ ಓಡಿಸುತಿರಲಿಲ್ಲವೇನೋ ?

ಕಾಶಿ—ಅದೆಲ್ಲಾ ನಿಜಾವ್ಮಾ! ಆದರೆ ನನಗೆ ಮನಸ್ಸಿನಲ್ಲಿ ಮೂರು ಹೊತ್ತೂ ರಾಜಕುಮಾರರ ವಿಚಾರವೇ ಕೊರೀತಿರುತ್ತೆ. ಈ ವಿಚಾರದಲ್ಲಿ ತಾವೂ ಇಷ್ಟು ಅಲಕ್ಷ್ಯವಾಗುತಿರೋದನ್ನ ನೋಡಿದರೆ ನನಗೆ ಬಹು ಸಂಕಟವಾಗುತ್ತೆ. ಅಮ್ಮಾ! ಹೊಟ್ಟೇಲಿ ಹುಟ್ಟಿದ ಮಗನ ವಿಚಾರದಲ್ಲಿ ...... ಇವರ ಮೇಲಿರೋ ಅಷ್ಟು ಪ್ರೀತಿಯಾದರೂ ಇದ್ದಿದ್ದರೆ........ ....

ರಾಜಮ್ಮ—(ರೇಗಿ) ಇಲ್ಲಾಂತ ಹೇಗೆ ಗೊತ್ತು ?

ಕಾಶಿ— (ವಿನಯದಿಂದ) ಅಮ್ಮಾ! ತಾವು ಕೋಪಿಸಬಾರದು. ಹೊಟ್ಟೇಲಿ ಹುಟ್ಟಿದ ಮಗ—ಬೆಳೆದಿದ್ದಾರೆ—ಮದುವೆಯಾಗಬೇಕು ಅವರಿಗೆ. ಲೋಕರೂಢಿಯಾಗಿ ಇವರಿಗಾದ ಹೊರತು ಅವರಿಗೆ ಮಾಡೋ ಹಾಗಿಲ್ಲ. ಇವರೋ ಮದುವೆ ಮಾಡಿಕೋಂತ ನೀವು ಬೇಡಿಕೊಂಡರೂ ನಿಮ್ಮ ಮಾತನ್ನು ತಿರಸ್ಕರಿಸಿ ಹೀಗಲೆಕೊಂಡಿದಾರೆ. ಒಂದು ಸಮಯ ಇವರು ಮದುವೇಗೊಪ್ಪಿದರೂ ಯಾರೂ ಹೆಣ್ಣು ಕೊಡಲಾರರು.

ರಾಜಮ್ಮ— ಯಾಕೇ ?

ಕಾಶಿ— ಇವರ ಹುಟ್ಟುನೋಡಿ ಯಾರು .. ..

ರಾಜಮ್ಮ—(ಕಿಡಿಯಾಗಿ) ಕಾಶೀೀೀ!

ಕಾಶಿ—(ತಡವರಿಸಿ) ಹುಟ್ಟೂಂದರೆ ಇವರ ಬಟ್ಟೆಬರೆ, ನಡತೆ, ಹೊಲೆಯರ ಸಂಗಡ ಓಡಾಟ, ಪೋಲೀಸು ಸರ್ಕಾರದೋರನ್ನ ಎದುರಿಸೋದು, ಕತ್ತೇ ಕುದುರೇನ ಒಂದನ್ನೇ ಮಾಡೋದು ಇದನ್ನೆಲ್ಲಾ ..

(ಹೊರಗಡೆ ಹೆಜ್ಜೆ ಸಪ್ಪಳ)

ರಾಜಮ್ಮ—ನಡೀ ಒಳಕ್ಕೆ ; ಯಾರೋ ಬಂದ ಹಾಗಿದೆ.

(ಸೂಟ್, ಬೂಟ್, ಹ್ಯಾಟುಗಳನ್ನು ಧರಿಸಿ ಕೈಯಲ್ಲಿ ಟೆನಿಸ್ ಬ್ಯಾಟ್ ಹಿಡಿದ ಹದಿನೆಂಟು ವರುಷದ ರಾಜಕುಮಾರನು ಬಾಯಲ್ಲಿದ್ದ ಸಿಗರೇಟನ್ನು ತೆಗೆದು ನೆಲಕ್ಕೆ ಅಪ್ಪಳಿಸಿ, ತುಳಿದು, ಹ್ಯಾಟನ್ನು ಮೇಜಿನ ಮೇಲೆ ಬಿಸಾಕಿ ಒಳಕ್ಕೆ ಹೋಗಲಿರುವನು.)

ರಾಜ— (ತಾಯಿ ಕಡೆ ತಟ್ಟನೆ ತಿರುಗಿ) ಏನೂ! ನಿನ್ನ ತಲೇ ನೋವೇನು ಖಾಯಿಮ್ಮಾದ ಹಾಗೇನೆ?

ರಾಜಮ್ಮ—ಯಾಕೆ ಮಗೂ! (ದುಃಖದಿಂದ) ಹಾಗೇ ಬಯಸು ತೀಯೇನೂ?

ರಾಜ—(ಅಲಕ್ಷ್ಯದಿಂದ) ಹಾಗಲ್ಲ. ಸದ್ಯ ನೀನು ಬೇಗ ಹುಷಾ ರಾದರೆ ಸಾಕು. ಮನೇಲಿ ಈಗ ಗ್ರಾಮಾಫೋನು ಹಾಕಿ ವರ್ಷವಾಯಿತು. ರೇಡಿಯೋ ಅನಕಾ ಮುಟ್ಟೋ ಹಾಗೇ ಇಲ್ಲ. ಸರೀ ಮನೆಗೆ ಯಾರೂ friends ಬರೋಹಾಗೇ ಇಲ್ಲ.

ರಾಜಮ್ಮ—ಇದು ಯಾಕೆ ಮಗೂ ಹೀಗಿ ಮಾತಾಡುತೀ?

ರಾಜ—ಇನ್ನೇನು ಹೇಳು. ಖಾಯಿಲೆ ಮಲಗಿದರೂ ಇತರರಿಗೆ ತೊಂದರೆಯಾಗದ ಖಾಯಿಲೇಲಿ ಮಲಗಬೇಕು.

ರಾಜಮ್ಮ—ರಾಜಾ! ನನ್ನ ವಿಚಾರದಲ್ಲಿ ನೀನು ಮೊದಲಿಂದ ಹೀಗೇಕೆ ನಿಷ್ಠುರವಾಗಿದೀ? ನಾನು ನಿನ್ನ ಹೆತ್ತು ಹೊತ್ತು ಸಾಕಲಿಲ್ಲವೇ? ಇಷ್ಟು ದಿನಗಳೂ ಪ್ರೀತಿಯಿಂದ ಬೆಳಸಲಿಲ್ಲವೇ? ಕುಮಾರಾ! ನಾನು ನಿನ್ನ ತಾಯಿ ಅಲ್ಲವೇ? ನೀನು ನನಗೋಸ್ಕರ ಏನೂ ಮಾಡಬೇಡ. ಒಂದುಸಲ ಹತ್ತಿರ ಬಂದು ಪ್ರೀತಿಯಿಂದ 'ಅಮ್ಮಾ'ಂತ ಕೂಗು ಸಾಕು, ನನ್ನ ಖಾಯಿಲೆಯೆಲ್ಲಾ ವಾಸಿಯಾಗುತ್ತೆ.

ರಾಜ—ಚೆನ್ನಾಗಿದೆ! ನೀನು ಹೆತ್ತು ಹೊತ್ತು ಸಾಕಿದ್ದಕ್ಕೆ ನಾನು ಹೊಣೆಯೋ! ಇಲ್ಲಾ ನಾನೇನಾದರೂ ಬಂದು ಮೊದಲೇ ಬೇಡಿಕೊಂಡಿ ದ್ದೆನೋ! ಎನು ಹೆಂಗಸರ logic!

(ಬಲಗಡೆಯ ಬಾಗಿಲಿಂದ ಒಳಕ್ಕೆ ಹೋಗಲಿರುವನು. ಅಷ್ಟರಲ್ಲಿಯೇ ಇತ್ತ ಕಡೆಯಿಂದ ವಸಂತಕುಮಾರನು ಬರುವನು.)

ವಸಂತ—(ರಾಜನ ಬಳಿಗೆ ಹೋಗಿ) ರಾಜಾ! ನಿನ್ನ ವಿದ್ಯಕ್ಕೆ ಈ ಬಗೆಯ ನಡತೆ ಶೋಭಿಸೊಲ್ಲ. ದೇವರಿಗಿಂತಲೂ ಪವಿತ್ರಳಾದ, ಆತ್ಮ ಕ್ಕಿಂತಲೂ ಪ್ರಿಯಳಾದ ತಾಯಿ ನನ್ನನ್ನು ಒಂದು ಬಾರಿ 'ಅಮ್ಮಾ' ಅನ್ನು, ಸಾಕೂಂತ ಬೇಡಿದರೆ—ನಿನ್ನ logic ನ ವೈಭವ ತೋರಿಸುತಾ ಇದೀ ಯಲ್ಲಾ?

ರಾಜ—(ರೇಗಿ) shut up ! ನಿನ್ನ ಬುದ್ಧಿವಾದ ನನಗೆ ಬೇಕಿಲ್ಲ, ಅದನ್ನೆಲ್ಲಾ ನಿನ್ನ ವಾನರ ಸೇನೆಯ ಹೊಲೇರಿಗೆ reserve ಮಾಡಿಟ್ಟಿರು.

ವಸಂತ—ರಾಜಾ ! ನಾನು....

ರಾಜ—ಸಾಕಯ್ಯಾ ನಿನ್ನ ಹರಿಕತೆ! ನೀನೇನೋ ನನಗಿಂತ ಎರಡು ವರುಷ ಮುಂಚೆ ಹುಟ್ಟಿದೆ. ಆದಾಕ್ಷಣಕ್ಕೇ ನನ್ನನ್ನು ದಂಡಿಸೋ ಹಕ್ಕು ನಿನಗಿಲ್ಲ. ತಿಳಿಯಿತೇ? ನಿನ್ನ ಯೋಗ್ಯತೆ ಸರಿಯಾಗಿಟ್ಟುಕೋ ಮೊದಲು ; ನನಗವಮಾನವಾಗುತ್ತೇ. ನನ್ನ ಸ್ನೇಹಿತರೆಲ್ಲಾ ಕೇಳುತಾರ— ಆ ಹೊಲಗೇರಿ ಬೆಟ್ಟನ ಮಗಳ ಕೈಹಿಡಿಕೊಂಡು ನಡೆಸುತಾನೆ ನಿಮ್ಮಣ್ಣಾಂತ. ಸಾಲದೇ ನಿನ್ನ ಕೀರ್ತಿ? ಈ ಮನೆಗೆ ನೀತಂದ ಗೌರವ ? ಆ ಕೋರೀಗಿಂತ ಕಡೆಯಾಗಿ ಹೋದಳು ನನ್ನ lady friend Miss Lissy ! ಆವತ್ತು ಪಾರ್ಟೀನಲ್ಲಿ ಅವಳು soup ಕೊಡೋದಕ್ಕೆ ಬಂದರೆ 'ಕ್ಷಮಿಸಿ, ನಾನು soup ಕುಡಿಯಲ್ಲಾ'ಂತ ಒದರಿ, ಎದ್ದು ಬಂದೆಯಲ್ಲಾ brute ಹಾಗೆ. ಅವಳ ಕಣ್ಣಲ್ಲಿ ನೀರು ಬಂದಿದ್ದಾರೂ ನಿನಗೆ ಜ್ಞಾನವಿದೆಯೇ ?

ವಸಂತ—ರಾಜಾ ! ನೀನು ಈ ರೀತಿ ಸುಳ್ಳು ಸಮಾಚಾರ.......

ರಾಜ—ನಾನು ಸುಳ್ಳು ಹೇಳುತ್ತೇನೆಯೇ? Shut up ! I know every inch of you. You are a rogue ! ನೀನು ತಪ್ಪಿ ಹುಟ್ಟಿದಿ ಈ ಮನೇಲಿ !

ರಾಜಮ್ಮ—ರಾಜಾ ! ಸಾಕುಮಾಡು !

ರಾಜ—ನೀನು ಇವನಿಗೆ ಸರಿಯಾಗಿದ್ದಿ. ನಿನಗೆ ಸರಿಯಾಗಿ ಹೆತ್ತಿದ್ದಿ. ಅವನಿಗೇ ಹೇಳು ನಿನ್ನ ಪುರಾಣಾನಾ !

(ಕೋಪವನ್ನು ನುಂಗುತ್ತಾ, ತಿರಸ್ಕಾರ ದೃಷ್ಟಿಯನ್ನು ಬೀರಿ ಬಲಗಡೆ ರೂಮಿಗೆ ಹೊರಟುಹೋಗುವನು.)

ವಸಂತ—(ರಾಜಮ್ಮನ ಬಳಿಗೆ ಹೋಗಿ ಆಕೆಯ ಪಾದದ ಬಳಿ ಕೂತು) ಅಮ್ಮಾ! ರಾಜ ಬಹಳ ದುಡುಕು. ಈ ದಿನವಲ್ಲ ನಾಳೆಯಾದರೂ ಅವನಿಗೆ ತಾಯೀನ್ನೋ ವಸ್ತುವಿನ ಬೆಲೆ ತಿಳಿಯುತ್ತೆ. ಆಗಲಾದರೂ ನಿನ್ನ ಬಳಿ ಬಂದು ಪಾದಸೇವೆ ಮಾಡುತಾನೆ.

ರಾಜಮ್ಮ—(ಮುಖದಲ್ಲಿ ಜುಗುಪ್ಸೆಯನ್ನು ತಗ್ಗಿಸಿಕೊಳ್ಳುತ್ತಾ) ಮಗೂ! ಅವನು ಹೇಳಿದ—ಆ ಬೆಟ್ಟನ ಹುಡುಗೀ...........

ವಸಂತ—(ನಕ್ಕು) ಅಮ್ಮಾ! ಆ ವಿಚಾರದಲ್ಲಿ ಕಾಶೀನ ಕೇಳಮ್ಮ.

ರಾಜಮ್ಮ—ಅವನಿಗೇನು ಗೊತ್ತು? ಎಲ್ಲಾ ಬಿಟ್ಟು ಕಾಶೀನ?

ವಸಂತ—ಕಾಶಿ ಅವರನ್ನೆಲ್ಲಾ ನೋಡಿದಾನಂತಮ್ಮ; ಅವನೇ ಹೇಳುತ್ತಿದ್ದ ಮಂಜನ ಕೈಲಿ.

ರಾಜಮ್ಮ—ಕಾಶೀ!!

ಕಾಶಿ—(ಒಳಗಿನಿಂದ ಬರುವನು. ಮುಖದಲ್ಲಿ ಅಸಹನೆ) ಅಮ್ಮಾ!

ರಾಜಮ್ಮ—ಹೊಲಗೇರಿ ಬೆಟ್ಟನಿಗೆ ಮಕ್ಕಳಿವೆಯೋ? ನಿನಗೇನಾದರೂ ಗೊತ್ತೆ?

ಕಾಶಿ—ಒಂದು ಹೆಳವಿ ಹುಡುಗಿ ಇದೆಯಮ್ಮ ಎಂಟು ವರುಷದ್ದು. ಅದಕ್ಕೆ ಎರಡು ಕಾಲೂ ಇಲ್ಲ. ಅವತ್ತು ಆಸ್ಪತ್ರೇಗೆ ಎತ್ತಿಕೊಂಡು ಬಂದಿದ್ದ.

ರಾಜಮ್ಮ—(ಹುಸಿನಗೆ ನಕ್ಕು) ಸರಿ ಹೋಗು.

[ಕಾಶಿಯು ಹೊರಟುಹೋಗುವನು]

ರಾಜಮ್ಮ—(ವಸಂತನ ಕಡೆ ತಿರುಗಿ) ಆದರೂ ..ನೀನು ಯಾಕೆ ಆ ಹುಡುಗೀ ಕೈಹಿಡಿಯಬೇಕು?

ವಸಂತ—ಅಮ್ಮಾ! ಡಾಕ್ಟರು ಅದಕ್ಕೆ ಕಾಲು ಬರೋದಕ್ಕೆ ಔಷದಿ ಕೊಡುತಿದಾರೆ. ಈಗ ನಾಲ್ಕು ದಿನಗಳಿಂದ ಕೈಹಿಡಿದುಕೊಂಡರೆ ಸ್ವಲ್ಪ ಓಡಾಡುತ್ತೆ. ಇನ್ನೊಂದು ತಿಂಗಳಿಗೆ ಕಾಲುಗಳಲ್ಲಿ ಪೂರ್ತಿ ಬಲ ಬಂದು ಚೆನ್ನಾಗಿ ಓಡಾಡೋ ಹಾಗಾಗುತ್ತಂತೆ... ....ಈಗಲೇ ಆ ಮಗುವಿನ ಸಂತೋಷಕ್ಕೆ ಪಾರವೇ ಇಲ್ಲ.

[ಮುಖದಲ್ಲಿ ಆನಂದ]

ರಾಜಮ್ಮ—ಆದರೂ ಮಗೂ, ನೀನು ಈ ಹೊಲಗೇರೀಲಿ ಕೆಲಸ ಮಾಡೋದನ್ನ ಬಿಟ್ಟು........

ವಸಂತ—ಅಮ್ಮಾ! (ದೈನ್ಯದಿಂದ) ಈ ಮಾತನ್ನು ಮಾತ್ರ ಆಡಬೇಡ. ನೀನೂ ಅಪ್ಪ ಬೇಡಾಂದದ್ದಕ್ಕಲ್ಲವೆ ಮರುಮಾತಾಡದೆ, ನಿತ್ಯವೂ ಹತ್ತಾರು ಜನರು ಹುಡುಗರು ಹೆಂಗಸರು ಪೋಲೀಸಿನೋರ ಲಾರಿಗಳಿಗೆ

ತಲೆಕೊಡುತಿದ್ದರೂ, ಅದನ್ನು ನೋಡಿಯೂ ಕೂಡ ನಾನು ಸುಮ್ಮನೆ ಹೇಡಿಯಾಗಿ ಕೂತಿರೋದು ? ನಾನು ಈ ಕೆಲಸಾನೂ ಮಾಡದೆ ಹೋದರೆ ಈ ದಿನಗಳಲ್ಲಿ ಬದುಕಿದ್ದರೂ ಸತ್ತಂತೆಯೇ !

(ಪಂಚೆ, ಕೋಟು, ಜರಿ ರುಮಾಲು, ಉತ್ತರೀಯಗಳನ್ನು ಧರಿಸಿ, ಕೈಲಿ ಬೆತ್ತವನ್ನು ಹಿಡಿದು ರಾಯರ ಪ್ರವೇಶ. ಬಾಡಿದ ಮುಖವಾದರೂ ತಿದ್ದಿದ ಮೀಸೆಗಳು, ಕಿವಿಯಲ್ಲಿ ವಜ್ರದ ಕಡುಕು, ಕೈಬೆರಳುಗಳಲ್ಲಿ ವಜ್ರ ಕೆಂಪಿನುಂಗುರಗಳು. ವಸಂತನು ಹೋಗಿ ಬೆತ್ತ, ಕೋಟು, ಉತ್ತರೀಯ ಗಳನ್ನು ತೆಗೆದುಕೊಂಡು ಎದುರು ಬಾಗಿಲಿನಿಂದ ಒಳಕ್ಕೆ ಹೋಗುವನು. ರಾಯರು ಕುರ್ಚಿಯ ಮೇಲೆ ಕೂಡುವರು.)

ರಾಯ—ಹ್ಯಾಗಿದೀ ?

ರಾಜಮ್ಮ—ಸ್ವಲ್ಪ ತಲೆನೋವು ಇದ್ದೇ ಇದೆ, ಅದೇನು ಈ ಜನ್ಮದಲ್ಲಿ ಬಿಡೋಹಾಗಿಲ್ಲ ಏನು, ಈಗ ಯಾವುದು ರೈಲು ?

ರಾಯ—ರೈಲಿಲ್ಲ. ಕೋಲಾರದಿಂದ ನಾನೂ ಜೋಯಿಸರೂ ಟ್ಯಾಕ್ಸಿಮಾಡಿಕೊಂಡು ಬಂದುಬಿಟ್ಟೆವು.

ರಾಜ—ಏನಾಯಿತು ಹೋದ ಕೆಲಸ ?

ರಾಯ—ನಾಲ್ಕು ಹೆಣ್ಣುಗಳನ್ನು ನೋಡಿದೆವು. ಚೆನ್ನಾಗಿವೆ. ಅವುಗಳ ಪೈಕಿ ಒಂದು ನೀನು ಕೇಳಿದ ಹಾಗೇ ಬಡವರ ಮನೇದು, ಆದರೂ ಬಹು ಲಕ್ಷಣವಾಗಿದೆ.

ರಾಜ—ಯಾರಹಾಗಿದೆ ?

ರಾಯ—ಇನ್ನು ಯಾರ ಹಾಗೇ !........ನಿನ್ನ ಹಾಗೆ ....ಆದರೆ

ರಾಜಮ್ಮ—ಆದರೇನು ?

ರಾಯ—ವಸಂತನಿಗೇಂದರೆ........(ಸುತ್ತಲೂ ನೋಡಿ ಗಟ್ಟಿಯಾಗಿ) ವಸಂತಾ ! ವಸಂತಾ ! (ಉತ್ತರವಿಲ್ಲ).

ರಾಜಮ್ಮ—ಎಲ್ಲೋ ತೋಟದಲ್ಲಿರಬಹುದು. ಹಂ, ಮುಂದೆ ?

ರಾಯ—ಯಾರೂ ಹೆಣ್ಣುಕೊಡೋದಕ್ಕೆ ಒಪ್ಪಲ್ಲ.

ರಾಜಮ್ಮ—(ಕುತೂಹಲದಿಂದ) ಯಾಕೇ ?

ರಾಯ—"ದೇಶ, ಸೇವೆ, ಖಾದಿ, ಪಿಟಿಟಿನ್ನೋದು, ಜೈಲು ಇದ

ರಲ್ಲಿದಾನೆ ಅವನನ್ನ ನಂಬಿ ನಮ್ಮ ಹುಡುಗಿ ಏನು ಸುಖಪಟ್ಟೀತು! ಹಣ ಇರಬಹುದು; ಆದರೆ ಅದು ಯಾವತ್ತು ಸರಕಾರದೋರ ವಶ ನಾಗುತ್ತೋ ಹೇಳಕ್ಕೆ ಬರದು ' ಅಂತಾರೆ.

ರಾಜ—ಅಂದರೆ ?

ರಾಯ—ಅಂದರೆ ಅವನಿಗೊಂದು ಹೆಣ್ಣು ಗೊತ್ತಾಗೋವರೆಗೆ........

ರಾಜಮ್ಮ—ರಾಜಂಗೆ ಮದುವೇ ಇಲ್ಲಾಂತಲೇ ? (ಸರ್‍ರನೆ ಕೋಪವು ಕಿಡಿಯಾಗುವುದು.) ತುಂಬ ಚೆನ್ನಾಗಿದೆ! ಹಲವು ದಾರೀಗೆ ಬಿದ್ದು, ನಿಮ್ಮ ಮಾತನ್ನೂ ಕೇಳದೆ, ಊರ ಗೋಳನೆಲ್ಲಾ ಕಟ್ಟಿಕೊಂಡು ಅಲೆಯೋ ಈ ಐಲನ ನೆಪಮಾಡಿಕೊಂಡೂ, ಮುತ್ತಿನಮಣಿ ಅಂಥಾ ಮಗನ ಮದುವೆ ನಿಲ್ಲಿಸುತಾರಂತೆ. ಚೆನ್ನಾಗಿದೆ. ಕಾಶಿ ಹೇಳಿದ್ದು ಕೇಳಿದಿರಾ? ನಾಲ್ಕು ದಿನಗಳ ಕೆಳಗೆ ಪಾರ್ಕಿನಲ್ಲಿ ರಾತ್ರಿ ಹತ್ತುಗಂಟೇನಾಗ ರಾಜ, ಅವನ ಸ್ನೇಹಿತಳು ಆ ಟೋಪಿ ಹುಡುಗಿ ಇದಾಳಲ್ಲ, ಅವಳ ಸಂಗಡ ಸಿಗರೇಟು ಸೇದುತ್ತಾ ಕೂತಿದ್ದನಂತೆ. ಬೆಳೆದ ಮಕ್ಕಳನ್ನು ಮದುವೆ ಇಲ್ಲದೆ ಹೀಗೆ ಬಿಟ್ಟರೆ ಅದರ ಪಾಪವೆಲ್ಲಾ ನಿಮ್ಮ ತಲೇಮೇಲೆ!.... ಹೀಗೆಲ್ಲಾ ಆಗೋ ಹಾಗಿದ್ರೆ ನಾನೀಗಲೇ ಆ ವಸಂತನನ್ನು ಕರೆದು........(ಸುತ್ತಲೂ ತಿರುಗಿ) ವಸಂತಾ! ವಸಂತಾ! ವಸಂತಾ ಾ ಾ ಾ!

ರಾಯ—(ಹತ್ತಿರ ಓಡಿಬಂದು) ರಾಜೀ! ಸ್ವಲ್ಪ ತಡೀ ನಿನ್ನದಮ್ಮಯ್ಯ

ವಸಂತ—(ಎದುರು ಬಾಗಿಲಿನಿಂದ ಓಡಿಬಂದು) ಕೂಗಿದೆಯಮ್ಮಾ?

ರಾಜಮ್ಮ—ಎಲ್ಲಿದ್ದೆ ?

ವಸಂತ—ಹಿತ್ತಲಲ್ಲಿ ಬೇಸಿನ್ ತೊಳೀತಿದ್ದೆ.

(ರಾಯನ ಕಣ್ಣುಗಳಲ್ಲಿ ನೀರು ತುಂಬುವುದು)

ರಾಜಮ್ಮ—(ಉಗುಳು ನುಂಗಿ) ನೀನು ಯಾಕೆ ತೊಳೀತೀಯಪ್ಪಾ! ಆ ಕೆಲಸದೋಳು . .

ವಸಂತ—ಅಮ್ಮಾ! ಅವರು ದುಡ್ಡಿಗೋಸ್ಕರ ಮಾಡುತಾರೆ. ಅಸಹ್ಯ ಪಟ್ಟುಕೊಂಡು ಚೆನ್ನಾಗಿ ತೊಳೆಯಲ್ಲ.

ರಾಯ—ವಸಂತಾ! ನೀನು ಜೋಯಿಸರ ಮನೆಗೆ ಹೋಗಿ ರಾತ್ರಿ ಎಂಟು ಘಂಟೆಗೆ ಇಲ್ಲಿಗೆ ಬರೋಹಾಗೆ ಹೇಳಿಬರ್ತೀಯಾ?

ವಸಂತ—ಆಗಲಪ್ಪಾ ! (ಹೊರಡಲಿರುವನು).

ರಾಜಮ್ಮ—ವಸಂತಾ ! ನಿನಗೊಬ್ಬರು ದೊಡ್ಡಮನುಷ್ಯರ ಮನೆ ಹುಡುಗಿ ನೋಡಿದಾರೆ. ರಾಜನಿಗೆ ಒಬ್ಬರು ಜಮೀನ್ದಾರರ ಮನೆ ಹೆಣ್ಣು ನೋಡಿದಾರೆ. ಹುಡುಗೀರ ಫೋಟೋ ತಂದಿದಾರೆ. ನೋಡಿ ಒಪ್ಪಿದರೆ ಬರೋ ತಿಂಗಳು ಎರಡು ಮದುವೆಗಳನ್ನೂ .....

ವಸಂತ—(ರಾಜಮ್ಮನ ಬಳಿ ಬಂದು ಆಕೆಯ ಕೈಗಳನ್ನು ಹಿಡಿದು, ಅಮ್ಮಾ! ಮೂರು ವರ್ಷಗಳಿಂದಲೂ ನಿಮ್ಮನ್ನು ಇದೊಂದು ವಿಚಾರವಾಗಿ ಎಷ್ಟು ಪ್ರಾರ್ಥನೆ ಮಾಡಿಕೊಂಡಾಗ್ಯೂ, ನಿಮಗೇಕೆ ದಯಬಾರದು ! ದಯಮಾಡಿ ಇದೊಂದು ವಿಚಾರದಲ್ಲಿ ನನ್ನನ್ನ ಒತ್ತಾಯ ಮಾಡಬೇಡಿ. ಕೊನೆಯ ಬಾರಿ ಬೇಡಿಕೊಳ್ಳುತೀನಿ; ನನ್ನ ಜೀವಮಾನದ ರೀತಿಗೆ ಇದಕ್ಕಿಂತ ದೊಡ್ಡ ಬಾಧಕ ಮತ್ತೊಂದಿಲ್ಲ ಅಮ್ಮಾ! ನನ್ನ ಮೇಲಿನ ಪ್ರೇಮಕ್ಕಾದರೂ ನನ್ನನ್ನು ನಿಮ್ಮ ಸೇವೆಗೇನೆ ಮುಡುಪಾಗಿಡಿ. ರಾಜನಿಗೆ ಒಳ್ಳೆಯ ಹೆಣ್ಣು ನೋಡಿ ಅಧ್ವೈರ್ಯವಾಗಿ ಮದುವೆಮಾಡೋಣ. (ರಾಜಮ್ಮನ ಪಾದಗಳನ್ನು ಮುಟ್ಟಿ ಕಣ್ಣಿಗೊತ್ತಿಕೊಳ್ಳುವನು.)

ರಾಜಮ್ಮ—ವಸಂತಾ ! ನೋಡು ; ರಾಜನಿಗೆ ಮದುವೆಯಾಗಿ ಬಿಟ್ಟರೆ, ಮುಂದೆ ನೀನು ಮಾಡಿಕೋಬೇಕೂಂದರೂ ಸಾಧ್ಯವಾಗೊಲ್ಲ. ದುಡುಕಿ ಮಾತನಾಡಬೇಡ. ಯೋಚಿಸು

ವಸಂತ—ಅಮ್ಮಾ! ಈ ಪಾದಗಳಾಣೆಗೂ ನನ್ನ ಈ ಜನ್ಮದಲ್ಲಿ ನಾನು ಮದುವೇ ಮಾಡಿಕೊಳ್ಳಲ್ಲ, ಇದು ಸತ್ಯ!

(ರಾಯರು ದಿಕ್ಕುತೋರದೆ ಕೈಕೈ ಹಿಸುಕಿಕೊಳ್ಳುತ್ತಿರುವರು)

ರಾಜಮ್ಮ—ಹಾಗಾದರೆ ರಾಜನ ಮದುವೆಗೆ ಏರ್ಪಾಟುಮಾಡಬಹುದೇ ?

ವಸಂತ—(ಚಕಿತನಾಗಿ) ಇದು ಯಾಕಮ್ಮಾ ಹೀಗ ಕೇಳುತೀ ? ನನ್ನ ತಮ್ಮ ರಾಜನ ಮದುವೆ ಮಾಡೋದಕ್ಕೆ, ನನ್ನ ತಾಯಿತಂದೆಗಳಾದ ನೀವು, ನನ್ನ ಒಪ್ಪಿಗೆ ಕೇಳಬೇಕೆ ?

ರಾಜಮ್ಮ—ನಂತರ ನೀನು ಪಶ್ಚಾತ್ತಾಪಪಡುವೆ !

ವಸಂತ—ನಿನ್ನಾಣೆಗೂ ಇಲ್ಲಮ್ಮ. ನಾನು ನಿನ್ನ ಹೊಟ್ಟೇಲಿ ಹುಟ್ಟಿರುವುದು ಸತ್ಯವಾದರೆ, ನಿನ್ನ ಪಾದಸೇವೆಯೇ........

[ರಾಜಮ್ಮನು ಕುಪಿತಳಾಗುವಳು]

ರಾಯ—ವಸಂತಾ! ಈ ವಿಚಾರದಲ್ಲಿ ನಾನು ನಿನ್ನ ಕೇಳಿ ಕೊಂಡರೂ ನಿನ್ನ ಸಂಕಲ್ಪಾನ....

ವಸಂತ—ಅಪ್ಪಾ! ಕೃಪೆಮಾಡಿ ಇದೊಂದು ವಿಚಾರದಲ್ಲಿ ನನ್ನನ್ನು ಮನ್ನಿಸಿ.

ರಾಜಮ್ಮ—ಸರಿ ಮಗೂ! ಹಾಗೇ ಆಗಲಿ! ದೇವರು ನಿನ್ನ ಸಂಕಲ್ಪಾ ಸಾಧಿಸೋದಕ್ಕೆ ಮನಸ್ಥೈರ್ಯ ಕೊಡಲಿ. ನೀನು ಹೊರಡು.

[ಮುಗುಳ್ನಗೆಯನ್ನು ಬೀರುವಳು]

(ವಸಂತನು ಆನಂದದಿಂದ ಹೊರಟುಹೋಗುವನು)

ರಾಯ—(ಮಗನು ಹೋದದ್ದನ್ನೇ ನೋಡಿ ಗದ್ಗದಿತನಾಗಿ) ರಾಜೀ! ನನ್ನ ಒಂದು ಕಣ್ಣನ್ನೇ ಚುಚ್ಚಿಬಿಟ್ಟೆ.

ರಾಜಮ್ಮ—ಸಾಕುಮಾಡಿ ನಿಮ್ಮ ಪ್ರಲಾಪ ವಸಂತನ ಮಾತಾಯಿತಲ್ಲ; ಇನ್ನು ಒಳ್ಳೇ ಲಗ್ನ ನೋಡಿ ರಾಜನ ಮದುವೆಗೆ ಏರ್ಪಾಡು ಮಾಡಿ .

ರಾಯ—(ದುಃಖದಿಂದ ಇತ್ತ ತಿರುಗಿ) ವಸಂತಾ! ನನ್ನ ತಬ್ಬಲಿ ಮಗುವೇ!! (ಗದ್ಗದಿತನಾಗಿ ಕುರ್ಚಿಯ ಮೇಲೆ ಕುಕ್ಕರಿಸಿಬಿಡುವನು. ತುಟಿಗಳು ಅದುರುವುವು. ಕಂಬನಿ ಸುರಿಯುವುದು.)

ಎರಡನೆಯ ಪ್ರವೇಶ

(ಒಂಟಿದಾರಿಯ ಪಕ್ಕ. ವಸಂತನೊಬ್ಬನೇ ಬರುವನು. ಮುಖದಲ್ಲಿ ಆನಂದ, ಎದುರಿಗೆ ಮಂಜ ಬರುವನು.)

ವಸಂತ—(ಸಂತೋಷದಿಂದ ಮಂಜಾ!

ಮಂಜ—ಬುದ್ಧೀ?

ವಸಂತ—ನಮ್ಮಪ್ಪ ಅಮ್ಮ ಇಬ್ಬರೂ ಒಪ್ಪಿಬಿಟ್ಟರು.

ಮಂಜ—ಯಾವುದಕ್ಕೆ ಬುದ್ಧೀ?

ವಸಂತ—ನನಗೆ ಮದುವೆ ಬೇಡಾನ್ನೋದಕ್ಕೆ

ಮಂಜ—ಅಪ್ಪಾ ಅವರು ಒಪ್ಪಿದರೆ ?

ವಸಂತ—ಹೌದು.

ಮಂಜ—(ಆಶ್ಚರ್ಯ ಮತ್ತು ದುಃಖದಿಂದ) ರಾಯರೇ ಬಾಯಿಬಿಟ್ಟು ಒಪ್ಪಿದರೇ ?

ವಸಂತ—ಇಲ್ಲ ಮಂಜಾ ! 'ನೋಡಿಕೊಂಡು ಬಂದಿರೋ ಹೆಣ್ಣುಗಳಲ್ಲಿ ಯಾವುದನ್ನಾದರೂ ಒಳ್ಳೇದನ್ನ ರಾಜನಿಗೆ ಕೊಟ್ಟು ಮದುವೇ ಮಾಡಿಬಿಡಿ, ನನ್ನನ್ನು ಇದರಿಂದ ತಪ್ಪಿಸಿ' ಅಂದೆ. ಅಮ್ಮ ಅನುಮಾನಪಟ್ಟರು ನನ್ನ ಮಾತಿನಲ್ಲಿ ; ಆಣೆ ಇಟ್ಟು ಹೇಳಿಬಿಟ್ಟೆ. ಆಗ ಅವರಿಗೆ ನನ್ನನ್ನ ನೋಡಿ ಎಷ್ಟು ಸಂತೋಷವಾಯಿತೂಂತೀಯಾ ! ನಮ್ಮಮ್ಮ ನನ್ನೆಂದೂ ಅಷ್ಟು ಪ್ರೀತಿಯಿಂದ ಹಸನ್ಮುಖಿಯಾಗಿ ನೋಡಿರಲಿಲ್ಲ.

ಮಂಜ—(ದುಃಖದಿಂದ) ರಾಯರೇನೂ ಏಳಲಿಲ್ಲವೆ ?

ವಸಂತ—ಸುಮ್ಮನಿದ್ದರು. ಈಗ ಹ್ಯಾಗಿದೆ ನಿನಗೆದೆ ಬತ್ತಿದ್ದು ?

ಮಂಜ—(ಹಸನ್ಮುಖಿಯಾಗಲೆತ್ನಿಸುತ್ತಾ) ಏನಿಲ್ಲಾ ಬುದ್ದೀ. ಉಷಾರಾಗಿದೀನಿ. ರಾಯರು ಊರಿಗೆ ಬಂದಮೇಲೆ, ನಿಮ್ಮನ್ನ ಒಬ್ಬರನ್ನೇ ನೋಡಿರಲಿಲ್ಲವೇ ?

ವಸಂತ—ಇಲ್ಲ, ಈಗ ಒಂದು ಘಂಟೆ ಕೆಳಗೆ ಬಂದರು. ನನ್ನ ಜೋಯಿಸರ ಮನೆಗೆ ಹೋಗಿಬಿಟ್ಟು ಬಾ ಅಂದರು—ಹೊರಟೆ.

ಮಂಜ—(ಕೈಮುಗಿದು) ಬ್ಯಾಡಿ ಬುದ್ದೀ ! ನನಗಾಗಿ ಆಗಲೇ ಪ್ಯಾಟೆವರೆಗೂ ಓಗಿದ್ದಿರಿ. ·ಜೋಯಿಸರ ಮನೆಗೆ ನಾನೇ ಓಗಿ ಬರ್ತೀನ್ರಿ—ಏನೇಳಬೇಕೇಳಿ.

ವಸಂತ—ಬೇಡ ಮಂಜ ! ಅಪ್ಪ ಹೇಳಿದಾರೆ, ನಾನೇ ಹೋಗುತೀನಿ. ನೀನು ಮನೆಗೆ·ಹೋಗು.

(ಇತ್ತಕಡೆಯಿಂದ ಬೆಟ್ಟಯ್ಯ ಬರುವನು. ಮೈಮೇಲೆ ದುಪಟ.
ಹಣೆಯಲ್ಲಿ ಕೆಂಪು ನಾಮ. ಕೈಲಿ ದೊಣ್ಣೆ)

ಬೆಟ್ಟ—(ದೂರದಿಂದ ನಮಸ್ಕರಿಸಿ) ಬುದ್ದೀ !

ವಸಂತ—(ಪ್ರೇಮದಿಂದ) ಏನು ಬೆಟ್ಟಯ್ಯಾ ?

ಬೆಟ್ಟ—ಆ ಇಪ್ಪೆ ಗಿಡದಡೀಲಿ ಕಾಯಿಲೆಯೋರಿಗೆ ನಾಲ್ಕು ಗುಡಲ

ತಯಾರಾದೋ. ರಾಗಿ ಉಲ್ಲು ಗೋಣಿಚೀಲದಿಂದ ವಸಿ ಆಸಿಗೆಗಳೂ ತಯಾರಾದೋ. ಆದರೆ, ಕಾಳನಮ್ಮ ' ನಾನು ಸಾಯೋ ಅಂಗಿದ್ರೆ ಇಲ್ಲೇ ಸಾಯ್ತೀನಿ, ಕೇರಿಬಿಟ್ಟು ಬರಾಕಿಲ್ಲಾಂ'ತಾಳೆ. ಆ ನಾದಾರನ ತಮ್ಮ ' ಕೇರಿಬಿಟ್ಟು ಬರೋ ಅಂತ ಕಾಯಿಲೆ ನನಗೇನು ? ಡಾಕಟ್ರರಿಗೆ ಗಾಳಿ ಉಚ್ಚು ' ಅಂತಾನೆ. ಚಿಕ್ಕಮುನಿಯುಂಗೆ ಬೆಳಗಿನಿಂದ ವಾಂತಿ ಬೇದಿ ಜಾಸ್ತಿಯಾಗ್ಯೆತ್ರೆ. ತಾವೇ ಒಸಿ ಪಾದ ಬೆಳಸಬೇಕು.

ವಸಂತ—ಮುನಿ ಹ್ಯಾಗಿದಾಳೆ ?

ಬೆಟ್ಟ—ಅಯ್ಯೋ ! ಈಸು ದಿನಾನು ತೆಪ್ಪಗೆ ಕುಂತ ಕಡೇನೆ ಕುಂತಿರ್ತಿತ್ತು. ಈಗೇನೊ ರವಷ್ಟು ಏಳಾಕಾಗುತ್ಯೆತ್ರೆ ತಮ್ಮ ದಯದಿಂದಾಂದ್ರೆ, ಬೆಳಗಿನಿಂದ ನಾಕು ಸಲ ಎದ್ದು ಬಿದ್ದು ಕಡೇಗೆ ಮಂಡಿ ಎಲ್ಲಾ ತರೆದು ಗಾಯವಾಗಿ ಅಳುತಿತ್ತು. ನಾಕು ಕೊಟ್ಟು ಒಳಗೆ ಮಲಗಿಸಿ ಬಂದೆ.

ವಸಂತ—(ಸಂತಾಪದಿಂದ) ಬೆಟ್ಟಾ ! ಹೊಡೆದೆಯಾ ಮಗೂನಾ ?

ಬೆಟ್ಟ—ಯಾಕೆ ಬುದ್ದೀ ?

ವಸಂತ—ಛೀ ! ಛೀ ! ಅದಕ್ಕೆ ಈಗ ಒಂದು ಪ್ರಪಂಚವೇ ಸಿಕ್ಕಿದ ಹಾಗಿದೆ........ಹ್ಞು—ಕುರುಡರಿಗಲ್ಲವೆ ಗೊತ್ತು ಕಣ್ಣಿನ ಬೆಲೆ. (ಇತ್ತ ತಿರುಗಿ) ಮಂಜಾ ! ನಾನು ಜೋಯಿಸರ ಮನೆಗೆ ಹೋಗಿ ಹೇಳಿ ಅಲ್ಲಿಂದ ಇವರ ಕೇರಿಗೆ ಹೋಗಿ ಬರುತೇನೆ. ನೀನು ನನ್ನ ಬಟ್ಟೆಗಳ ಬಚ್ಚಲ ಮನೆಗೆ ತಂದಿಟ್ಟಿರು.

ಮಂಜ—ಆಗಲಿ ಬುದ್ದೀ !

ವಸಂತ—ನೀನು ನಡೀ ಬೆಟ್ಟಯ್ಯ ! ಈಗ ಬಂದೆ.

[ವಸಂತನು ಅತ್ತ ಹೊರಟುಹೋಗುವನು]

ಮಂಜ—(ಹಿಂದೆ ಹೋಗುತ್ತಿರುವ ಬೆಟ್ಟನನ್ನು) ಅಯ್ಯಾ ! ಬೆಟ್ಟಯ್ಯ

ಬೆಟ್ಟ—(ಹಿಂದಿರುಗಿ) ಬುದ್ದೀ !

ಮಂಜ—ನೀನು ಎಡಗೈಯ್ಯೊ ಬಲಗೈಯ್ಯೊ ?

ಬೆಟ್ಟ—ಬಲಗೈಯ್ಯೋನಲ್ಲವ್ರಾ ಬುದ್ದೀ.

ಮಂಜ—ದನಾ ತಿಂತೀಯಾ ?

ಬೆಟ್ಟ—ಎಲ್ಲಿ ಬಂತು ದೇವರೇ! ಮಾರಾಯರು ನಮ್ಮ್ಮಾ ದಣಿಗಳು ನಮ್ಮ್ರಾ ಕೇರೀಗೆ ಕಾಲಿಟ್ಟ ಎಳ್ಡಾ ವರುಸದಿಂದ,ಕೋಳೀ, ಕುರಿ ಒರ್ತು ಬೇರೇದರ ವಾಷ್ಣೆ ಕೂಡ ಇಲ್ಲಾ ಬುದ್ಧಿ.

ಮಂಜ—ಸಂಜೆಯಾಗುತ್ತಲೂ ಸಡಕಾನೇ ತಾವ ಮಟ್ಟಿಗೆ ಕೇರೀನೆ ಆಜ್ರು.

ಬೆಟ್ಟ—ಇಲ್ಲಾ ಬುದ್ದೀ! ಅಂತೋರನ್ನ ಕೇರೀ ಒಳೀಕ್ಕೇ ಕೂಡಾ ಕೆಲ್ಲ. ಒಬ್ಬೊಬ್ಬರಾಗಿ ಎಲ್ಲಾ ಬಿಟ್ಟುಬಿಟ್ಟರು. ನಾಕ್ಕೈದು ಕುಳ ಅದನ್ನು ಬಿಡಲಾರದೆ ಕಡೇಗೆ ಕೇರೀನೆ ಬಿಟ್ಟು ಒಂಟೋದರು. ನಿಮ್ಮೀ ದಣಿಗೋಳ ದಯದಿಂದ ಎಲ್ಲಾ ಬುಟ್ಟುಬುಡುತಾ ಇದೀವಿ. ಈಗ ಕೇರೀಲಿ ಜಗಳ ಕದನ ಬೋ ಕಮ್ಮಿ ಬುದ್ದಿ. ಗಲೀಜು ಗಿಲೀಜು ಬೋ ಕಮ್ಮಿ. ಈಗೆಲ್ಲಾ ನಿಮ್ಮಂಗೆ ಆಗುತಾ ಇದೀವಿ ಬುದ್ದಿ!

ಮಂಜ—(ಆಶ್ಚರ್ಯ ಕೋಪಗಳಿಂದ) ನಮ್ಮಂಗೆ? ಒಕ್ಕಲಮಕ್ಕಳಂಗೆ?

ಬೆಟ್ಟ—ಔದು ಬುದ್ದೀ! ಶೆನಿವಾರ ಶನಿವಾರ ತಾನ ಮಾಡಿ ಬಜನೆ ಮನ್ಯಾಗೆ ಪೂಜೆ ಮಾಡುತೀವಿ.

ಮಂಜ—ಅಹಹಾ! ಅಂಗಾರೆ ಇನ್ನು ರವಷ್ಟು ದಿನಕೆ ಎಲ್ಲಾ ಬ್ರಾಂಬ್ರಾಗಿಬಿಡುತೀರಾ?!

ಬೆಟ್ಟ—ಅಯ್ಯೋ! ರಾಮರಾಮ! ಅದು ಆಗೋ ಮಾತರಾ ಬುದ್ದೀ? ನಮ್ಮ ದಣಿಗೋಳೇನೋ ಆಡ್ತಾರೆ, ಏಳ್ತಾರೆ ' ನಮಗೂ ನಿಮಗೂ ಬೇದ ಇಲ್ಲಾಂತ,' ಆದರೂ ಎಂಗಾಗುತ್ತೈತ್ರ ಬುದ್ದೀ! ಕತ್ತೆಗೂ ಕುದು ರೆಗೂ ಯತ್ಯಾಸ ಇಲ್ಲವರ? ಏನೇ ಮಾಡಲಿ ಕತ್ತೆ ಕುದುರೆ ಆಗುತ್ತೈತರ?

ಮಂಜ— ನಮಗಿಂತಾ ದೊಡ್ಡೋರನಕಾ ಆಗಿಬಿಟ್ಟರಿ?

ಬೆಟ್ಟ—(ನಮಸ್ಕರಿಸಿ) ಕೋಪಿಸಿಕೋ ಬ್ಯಾಡಿರಿ ಬುದ್ದೀ! ತಾವು ಕೇಳಿದ್ದಕ್ಕೇಳಿದೆ. ನಾವೇನು ಮಾಡಿದರೆ ತಾನೇ ನಮ್ಮ ಜಾತಿ ಅಳಿಸ್ತೈ ತರಾ ಬುದ್ದೀ?

ಮಂಜ—ಹಾಂ! ಕತ್ತೆ ಕುದುರೆ ಆಗಕಿಲ್ಲ; ಅದುಮಟ್ಟಿಗೆ ಮರಿ ಬೇಡ. ರಾಯರಿಗಿನ್ನೂ ಊಟ ಇಲ್ಲ; ಜಲ್ದಿ ಮನೇಗೆ ಕಳಿಸಿಬಿಡು.

ಬೆಟ್ಟ—(ನೊಂದು) ಊಟ ಇಲ್ಲವರಾ ಬುದ್ದೀ? ಅಯ್ಯೋ!

ಇಂಗೇಂತ ಗೊತ್ತಿದ್ದರೆ ನಾನು ಸಂಜೆ ಕಡೇನೇ ಬಂದು ಕಾಣುತಿದ್ದೆ. ಆಗಲಿ ಬುದ್ಧೀ! ... .. (ಹೋಗುತ್ತಾ ತಟ್ಟನೆ ಹಿಂದಿರುಗಿ) ಬುದ್ಧೀ! ನಿಮ್ಮ ಪಾದ ಮನ್ನಿಸಬೇಕು. (ಕೈ ಮುಗಿಯುವನು)

ಮಂಜ— ಪರವಾ ಇಲ್ಲ ಹೋಗು. (ಕ್ಷಣಕಾಲ ಚಿಂತಿಸಿ) ಈ ನನ್ನ ದೇವರ ಮದುವೇಗಂತೂ ಕಲ್ಲು ಬಿದ್ದಂಗಾಯಿತು. ಇದರಿಂದ ಆಯಮ್ಮ ನುರಿ ಒಸಿ ಕಡಿಮೆಯಾಗಿರಬಹುದು. ಅಯ್ಯೋ ರಾಯರ ಕಳ್ಳು ಎಂಗೆ ಬೇಯುತಾ ಐತೋ!

(ಪ್ರಸ್ಥಾನ)

ಮೂರನೆಯ ಪ್ರವೇಶ

[ರಾಯರ ಮಹಾಲಿನ ನಡುಮನೆ; ಹಿಂದಿನಂತೆಯೇ ಇದೆ. ಮಂಚದ ಕಡೆಯ ಕುರ್ಚಿಯೊಂದರ ಮೇಲೆ ರಾಯರು ಕುಳಿತಿದಾರೆ. ಪಕ್ಕದ ಕುರ್ಚಿಯಲ್ಲಿ ರಾಜಕುಮಾರನು ಕೈಲಿ ಪೇಪರು ಹಿಡಿದು ಏನನ್ನೋ ನೋಡುತ್ತ ಅಲಕ್ಷ್ಯಭಾವದಿಂದ ಕುಳಿತಿರುವನು. ಮಂಚದ ಮೇಲೆ ರಾಜಮ್ಮ ಮತ್ತು ಪಕ್ಕದಲ್ಲಿದ್ದ ಮುಕ್ಕಾಲು ಮಣೆಯ ಮೇಲೆ ವಸಂತಕುಮಾರನೂ ಕುಳಿತಿರುವರು.]

ರಾಯ— ರಾಜಾ! ಅಂದರೆ ಈ ನಾಲ್ಕು ಹುಡುಗೀರ ಪೈಕಿ ಯಾವುದೂ ನಿನ್ನ ಮನಸ್ಸಿಗೆ ಒಪ್ಪಿಗೆಯಾಗಲಿಲ್ಲವೇ?

ರಾಜ— ಇಲ್ಲ! (ಇತ್ತ ನೋಡದೆ)

ರಾಜಮ್ಮ— ಯೋಚನೆಮಾಡಿ ನೋಡು ಮಗೂ!

ರಾಜ— (ತಟ್ಟನೆ ತಿರುಗಿ) ಏನು? ಮದುವೇಂದರೆ ಗಾಡೀಗೆ ಕುದುರೆ ಕಟ್ಟೋ ಹಾಗೇಂತಲೋ, ನಿಮ್ಮ ಅಭಿಪ್ರಾಯ ಹ್ಯಾಗೇ? ....ಹುಂ.... Love ಅಂದರೇನು? Romance ಅಂದರೇನು? Marriage ಅಂದರೇನು? ಅನ್ನೋದರ ಒಂದಕ್ಷರವೂ ತಿಳೀದೇ ಇರೋ Stupid Little Girlsನ ಕಟ್ಟಿಕೊಂಡು ನನ್ನಂಥಾ Decent fellowನಾದರೂ ಸರಿ ಹುಚ್ಚು ಹುಚ್ಚಾಗಿ ಕುಣಿದರೆ, ಮನೇಲಿರೋ Yelders ಅನ್ನಿಸಿಕೊಂಡಿರೋರಿಗೆ ತಮಾಷೆಯಾಗಿರುತ್ತೆ. ಕಟ್ಟಿಕೊಳ್ಳೋನ Future, Ambition ಎಲ್ಲಾದರೂ ಹಾಳಾಗಿಹೋಗಲೀ. ಮತ್ತೆ (ಪೇಪರನ್ನೋದುತ್ತ ಕೂಡುವನು).

ರಾಜ—ರಾಜಾ! ಇತ್ತ ತಿರುಗು, ನನ್ನ ಕಡೆ ನೋಡು! ನಿನ್ನ Loveವೂ Romanceಗಳಿಗೆ ಅನುರೂಪಳಾದ ಹುಡುಗೀನ ನೀನೇ ನೋಡು ಹಾಗಾದರೆ

ರಾಜ—(ತಿರುಗದೆ) ನಾವು ನೋಡಿದ ಹುಡುಗೀ ನೀವು ಒಪ್ಪೊಲ್ಲಾ

ರಾಜಮ್ಮ—ಇದೇನು ಮಗೂ ಹೀಗೆ ಮಾತಾಡುತೀ?

ರಾಜ—ನಿಮಗದೊಂದೂ ಅರ್ಥವಾಗೊಲ್ಲ· ಯಾಕೆ ಸುಮ್ಮನೆ ಮಾತು?

ರಾಯ—ರಾಜಾ! ನೀನು ನನ್ನ ಜೊತೇಲಿ ನಾಳೆ ಬಾ, ಒಂದೂರಲ್ಲ ನಾಲ್ಕೂರನ್ನ ತಿರುಗೋಣ. ನಿನಗೆ ಕಣ್ಣಿಗೊಪ್ಪೋ ಹೆಣ್ಣನ್ನ ನೋಡಿ ಮದುವೆ ಮಾಡೋಣ. ಆಗಬಹುದೇ?

ರಾಜ—(ಇತ್ತ ತಿರುಗಿ) ಕಣ್ಣಿನ ಜಿಬುರು ತೆಕ್ಕೊಳ್ಳೋದಕ್ಕೆ ಬರದಿರೋ ಎಳೇ ಹುಡುಗೀರ ಸಂಗಡ ಮದುವೇಂದರೆ Stupid Non-sense! ಸದ್ಯಕ್ಕೆ ಈ ಮದುವೆ ಮಾತು ಬಿಡು. ನೋಡೋಣ. ನನಗೊಪ್ಪಿದ ನನ್ನ Life Mateನ Choose ಮಾಡಿ Public ಆಗಿ ಮದುವೆ ಮಾಡಿಕೊಳ್ಳೋ ಅಷ್ಟು ಸ್ವತಂತ್ರ ನನಗೆ ಬಂದಾಗ ನೋಡೋಣ.

ರಾಜಮ್ಮ—ಮಗೂ ರಾಜಾ! (ಮುಂದೆ ಬಂದು) ನೀನು ಹೀಗೆ ಮಾಡಿದರೆ ನಾನು ನೋಡಿಕೊಂಡು ಜೀವ ಬಿಗಿ ಹಿಡಿದು ಬದುಕಿರಲಾರೆ.

ರಾಜ—ನಿನಗೋಸ್ಕರ ನನ್ನ futureನ ಹಾಳುಮಾಡಿಕೊಳ್ಳಲಾರೆ. ಈಗ ಉಗಾದಿ ಹಬ್ಬದ ಮಾತು ಮುಗೀಲಿ. ನಾನು ಹೋಗಬೇಕು. ನನ್ನ friends ಕಾದಿದಾರೆ.

ರಾಯ—ರಾಜಾ! ನಿನ್ನ ಮಾತುಗಳೂ, ನೀನಾಡೋ ಧೋರಣೆ ಇವೊಂದೂ ನನ್ನ ಮನಸ್ಸಿಗೆ ಹಿತವಿಲ್ಲ.

ರಾಜ—ಅದಕ್ಕೆ ನಾನೇನೂ ಮಾಡಲಾರೆ· Youth and old age are like East and West.

[ಇತ್ತಲಿಂದ ಕಾಶಿ ಪ್ರವೇಶಿಸುವನು. ಮುಖದಲ್ಲಿ ಆರಿದ ಕೋಪ.]

ರಾಯ—ಎಲ್ಲರಿಗೂ ಹೇಳಿ ಬಂದೆಯಾ?

ಕಾಶಿ—ಹೇಳಿದೆ ಸ್ವಾಮೀ! ದೀಕ್ಷಿತರೂ ಸೋಮಯಾಜಿಗಳೂ

ಮಾತ್ರ 'ನಾವು ಇನ್ನು ಮೇಲೆ ರಾಯರ ಮನೇಲಿ ಹಬ್ಬವೇ ಆಗಲಿ, ತಿಥಿಯೇ ಆಗಲಿ ಊಟಮಾಡಲಾರೆವು' ಅಂತ ಹೇಳಿದರು. ..ಆಮೇಲೆ....

ರಾಯ—(ರೇಗಿ) ಯಾಕಂತೆ?

ಕಾಶಿ—ಗೊತ್ತಿಲ್ಲ ಸ್ವಾಮೀ! ಮಾತು ಮಾತಿಗೂ ಅವರವರಲ್ಲಿ 'ಹೊಲಗೇರಿ! ಹಾಗೆ! ಹೀಗೆ!' ಅಂತ ಅಂದುಕೊಳ್ಳುತ್ತಿದ್ದರು.

ರಾಯ—ಏನಿದರರ್ಥ?....ವಸಂತನ ವಿಚಾರವಾಗಿಯೇ ....

ಕಾಶಿ—ಇರಬಹುದು ಸ್ವಾಮೀ! ಗೊತ್ತಿಲ್ಲ.

ರಾಯ—(ಕಿಡಿಕಿಡಿಯಾಗಿ) ಕತ್ತೆ ಸೂಳೇ ಮಕ್ಕಳನ್ನ ತಗೊಂಡು ಬಂದು....(ಇತ್ತ ತಿರುಗಿ) ಮಂಜಾ! ಮಂಜಾ! ಮಂಜಾ ಆಾ!

[ಮೇಜಿನ ಮೇಲಿದ್ದ ಪ್ಯಾಡ್‌ನಿಂದ ಕಾಗದ ತೆಗೆದು ಏನನ್ನೋ ಬರೆಯುವನು]

ರಾಜಮ್ಮ—ಮಗನ ಮೇಲಿರೋ ನಿಮ್ಮ ಕುರುಡು ಪ್ರೀತೀಲಿ ಊರೋರನ್ನೆಲ್ಲಾ ಎದುರು ಹಾಕಿಕೊಳ್ಳುತ್ತೀರಷ್ಟೆ ...ಇದು ಯಾಕೆ ಇಷ್ಟೊಂದು ದುಡುಕು?

ರಾಜ—(ರಾಜಮ್ಮನ ಕಡೆ ತಿರುಗಿ) ನೋಡು! ನಾನು ಹೇಳಿದಾಗ ಅದು ನಂಬೋಹಾಗಿರಲಿಲ್ಲ; ಊರೋರೆಲ್ಲಾ ಕೂಗಿದ್ರೂನೂವೆ ... .

ರಾಯ—(ತಟ್ಟನೆ ಕತ್ತೆತ್ತಿ) ರಾಜಾ! ಸ್ವಲ್ಪ ತಡಿ! ಎಷ್ಟಾದರೂ ಅವನು ನಿನಗಿಂತ ದೊಡ್ಡೋನು ಮಂಜಾ ಾ!!

[ಮಂಜನು ಓಡಿಬರುವನು]

ಮಂಜ—ಬುದ್ಧೀ!

ರಾಯ—(ಕಾಗದ ಕೊಟ್ಟು) ಈ ಕಾಗದಾನ ಈಗಲೇ ತಗೊಂಡು ಸೋಮಯಾಜಿಗಳ ಮನೆಗೆ ಓಡಿಹೋಗಿ ಅವರಿಗೇನೇ ಖುದ್ದಾಗಿ ಕೊಟ್ಟು ಜವಾಬು ತಗೊಂಡು ಬೇಗ ಬಾ.

ಮಂಜ—ಸರಿ ಬುದ್ಧಿ! (ಹೊರಡುವನು)

ರಾಜ—ನಾನು ಹೊರಡುತೀನಿ. (ಏಳುವನು.)

ರಾಯ—ತಡೀ; ಉಗಾದಿಯ ಹಬ್ಬದ ಮಾತನಾದರೂ ಮುಗಿಸಿ ಬಿಡೋಣ. ಆಂ; ನಿನ್ನ ಸಲಹೆ ಏನು?

ರಾಜ—ಏನೂ ಇಲ್ಲ; ನನ್ನ friends ಒಂಭತ್ತು ಜನ ಬರುತಾರೆ.

ಅವರಿಗೆ ಊಟವಾದ ಮೇಲೆ New Years' Day Presents ಕೊಡ ಬೇಕು. ನನಗೆ ಒಂದು ಸಿಲ್ಕ್ ಸೂಟ್, ಒಂದು ಸರ್ಜ್ ಸೂಟ್ ಹೊಲಿಸಿ ಕೊಡಬೇಕು. ಹ್ಯಾಟ್, ಬ್ಯೂಟ್ಸ್ ಎಲ್ಲಾ ಡಿಸ್ಪೇವ್ ಆಗಿಹೋಗಿವೆ. ನನ್ನ ಮೋಟಾರ್ ಬೈಸಿಕಲ್ಲಿಗೆ ಒಂದು ಸೈಡ್‌ಕಾರ್ ತಗೋಬೇಕು.

ರಾಯ—ಅಂದರೆ ಒಟ್ಟು ನೂರು ರೂಪಾಯಿ ಬೇಕೂನ್ನ ?

ರಾಜ——ನೂರು ರೂಪಾಯೇ ! ಬೇಡ ! ಏನೂ ಬೇಡ

[ಹೊರಡಲಿರುವನು]

ರಾಯ—ಎಷ್ಟು ಬೇಕು ಹೇಳೂ !

ರಾಜಮ್ಮ—ನೂರೈವತ್ತು ರೂಪಾಯಿ ಕೊಟ್ಟುಬಿಡೀಂದರೆ. ನಾಳೇ ಮದುವೇಗೆ ಹ್ಯಾಗೂ ಆ ಗೌವರ್ನಮೆಂಟ್ ಬಾಂಡ್ಸನ್ನ ಮಾರಿಬಿಡಬೇಕು. ಈಗ ಅಕೌಂಟ್ನಲ್ಲಿರೋದನ್ನ ಡ್ರಾಮಾಡಿ ಕೊಟ್ಟುಬಿಡಿ

ರಾಯ—ನೂರೈವತ್ತು ನಾಕೇನ್ಪ ರಾಜ ?

ರಾಜ—ನಾಕೂಂತ ಕಾಣುತ್ತೆ

ರಾಯ—ವಸಂತ ! ಇಲ್ಲಿ ಬಾ, ಕೂತುಕೋ.

(ವಸಂತನು ಬಂದು ತಂದೆಬಳಿ ಕುರ್ಚಿಯಲ್ಲಿ ಕೂಡುವನು. ಮುಖ ದಲ್ಲಿ ಆಳವಾದ ಚಿಂತೆ)

ರಾಯ—(ಅವನ ಮುಖವನ್ನೇ ನೋಡುವನು. ದುಃಖವನ್ನು ತಡೆದು) ನಿನಗೆಷ್ಟು ಬೇಕು ?

ವಸಂತ—ಇಪ್ಪತ್ತೈದು ರೂಪಾಯಿ

ರಾಜಮ್ಮ—ಇಪ್ಪತ್ತೈದು ರೂಪಾಯಿ ಏನು ಮಾಡುತೀ ?

ವಸಂತ—ಅನಾಥ ಮಂದಿರದ ಕುರುಡರು ಕುಂಟರಿಗೆ, ಹೊಲಗೇರಿ ಲಿರೋ ಮಕ್ಕಳಿಗೆ ಬಟ್ಟೆಗಳನ್ನು ತೆಗೆದುಕೊಡಬೇಕೂಂತ .. .

ರಾಜಮ್ಮ—(ಕುಪಿತಳಾಗಿ) ಹಾಳುಮಾಡೋಕೆ ಅನ್ನು ..

ವಸಂತ—(ದೈನ್ಯದಿಂದ) ಅಮ್ಮಾ ! ... .

ರಾಯ—ಇರಲಿ ! ನಿನ್ನ ವಿಚಿತ್ರ ದಾರಿ ಯಾರಿಗೂ ತಿಳೀದು ... (ಒಂದು ಚೆಕ್ ಬರೆದು) ಹಿಡಿ ರಾಜ ! ನೂರೈವತ್ತು ರೂಪಾಯಿ. (ವಸಂತನ ಕಡೆ ತಿರುಗಿ) ನಿನಗೆ ಯೋಚನೆಮಾಡಿ ಕೊಡುತೀನಿ.

ವಸಂತ—ಆಗಲಪ್ಪಾ !

[ಮಂಜನು ಕಾಗದವನ್ನು ತಂದುಕೊಡುವನು.]

ರಾಯ—(ಆತುರನಾಗಿ ಬಿಚ್ಚಿ ಓದುವನು) ಈಚೆಗೆ ನಿಮ್ಮ ಮನೆಯ ಅಡುಗೆಯವರು ಹೋಗಬಾರದ ಕಡೆಗಳಿಗೆಲ್ಲಾ ಹೋಗುತ್ತಾರೆಂದು ಗೌರವಸ್ಥರ ಕಡೆಯಿಂದ ತಿಳಿದುಬಂದಪ್ರಯುಕ್ತ, ಈ ವಿಚಾರವನ್ನು ಮೊಖ್ತಾ ಹೇಳಲು ಹಿಂಜರಿದು ಆ ರೀತಿ ಹೇಳಿಕಳುಹಿಸಿದೆವು. ರಾಯರು ಅನ್ಯಥಾ ಭಾವಿಸಬಾರದಾಗಿ ಪ್ರಾರ್ಥನೆ. ಆ ದಿನದ ಅಡುಗೆಗೆ ಮಾತ್ರ ಬೇರೆ ಏರ್ಪಾಟು ಮಾಡುವ ದಯ ತೋರಿದರೆ ನಾವೆಲ್ಲರೂ ಎಂದಿನಂತೆ ನಾಡಿದ್ದು ತಮ್ಮ ಪಿತೃಗಳ ಸೇವೆಯಲ್ಲಿ ಭಾಗಿಗಳಾಗುತ್ತೇವೆ.

ಸದಾ ರಾಯರ ಸೇವೆಯಲ್ಲಿ

ಇತಿ,........

(ಓದುತ್ತ ಓದುತ್ತ ಕಿಡಿಯಾಗಿ ಎದ್ದು) ರಾಜೀ! ಕೇಳಿದೆಯಾ ಈ ಸುದ್ದಿನಾ? ತನ್ನ ತಪ್ಪನ್ನಾ ಮೆತ್ತಗೆ ಈ ಕುರೀ ಮೇಲೆ ತಳ್ಳುತಿದ್ದ. ಕಾಶೀ! ಕಾಶೀ!! (ಒಳಕ್ಕೆ ನುಗ್ಗುವನು. ರಾಜಮ್ಮನು ತಟ್ಟನೆದ್ದು ಹೋಗಿ ತಡೆಯುವಳು)

ರಾಜಮ್ಮ—ತಡೀರೀಂದ್ರೆ ನಿಮ್ಮ ದಮ್ಮಯ್ಯ !

ರಾಯ—ಏನು ತಡೆಯೋದು ! ಅವನನ್ನೀಗಲೇ

(ರಾಜಮ್ಮನು ರಾಯನ ಬಾಯಿ ಮೇಲೆ ಕೈಯಿಟ್ಟು ಏನನ್ನೋ ಪಿಸುಗುಟ್ಟುವಳು. ರಾಯನ ಮುಖವು ಕಳೆಗುಂದುವುದು. ಕಾಗದವನ್ನು ಮಡಿಸಿ ಜೇಬಿನಲ್ಲಿಟ್ಟುಕೊಳ್ಳುವನು.)

ಮಂಜಾ—ಬುದ್ದೀ ನಾನು ಅಲ್ಲಿರಲಾ ?

ರಾಯ—ಹೂಂ. ನಡೀಬಂದೆ.

(ರಾಯನು ಎದುರು ಬಾಗಿಲಿನಿಂದ ಒಳಕ್ಕೆ ಹೋಗುವನು. ರಾಜಮ್ಮನೂ ಹಿಂಬಾಲಿಸುವಳು.)

ವಸಂತ—(ನಿಧಾನವಾಗಿ ರಾಜಕುಮಾರನ ಬಳಿಗೆ ಬಂದು ನಿಂತು) ರಾಜಾ! ನೀನು ಮನಸ್ಸಿನಲ್ಲಿ ಬೇರೇ ತಿಳಿದುಕೊಳ್ಳದಿರೋ ಪಕ್ಷಕ್ಕೆ ಒಂದು ವಿಚಾರ ಬೇಡಿಕೊಳ್ಳುತೇನೆ.

ರಾಜ—(ಅತ್ತ ತಿರುಗಿ) I hate your cowardly manners. If you have got anything to talk, talk out like a man.

ವಸಂತ—(ದೈನ್ಯದಿಂದ) ರಾಜಾ! ಕೋಪಿಸಬೇಡ, ಪರದೇಶೀ ಬಟ್ಟೆಗಳ ಅಂಗಡಿಗಳ ಮುಂದೆ, ದಿನ ಬೆಳಗಾದರೆ ಹೆಂಗಸರು, ಮಕ್ಕಳು, ಹುಡುಗರು ಸತ್ಯಾಗ್ರಹ ಮಾಡಿ ಪೋಲೀಸಿನೋರ ದೊಣ್ಣೆಗೆ ತಲೆ ಕೊಡುತಾ ಇರೋದು ಯಾತಕ್ಕೆ ?

ರಾಜ—ತಲೆ ಇಲ್ಲದೆ.

ವಸಂತ—ಬೇಡ ರಾಜ! ಇಷ್ಟು ಪವಿತ್ರವಾದ ದಿನಗಳಲ್ಲಿ ಹುಟ್ಟಿ ಸ್ವತಃ ವಿದ್ಯಾವಂತನಾದ ನೀನು ಎಲ್ಲರಿಗೂ ಮಾದರಿಯಾಗುವ ರೀತಿಯಲ್ಲಿ ನಡೆದು ಕೊಂಡರೆ .. ....

ರಾಜ—Will you please shut up? (ದೂರ ಸರಿಯುವನು.)

ವಸಂತ—(ರಾಜನ ಕೈಹಿಡಿದು) ರಾಜಾ! ನೀನು ನನ್ನ ತಮ್ಮನಲ್ಲ. ನನ್ನ ತಂದೆ. ದಯವಿಟ್ಟು ಈ ಸಲದ ಉಗಾದಿಗೆ ಆ ಬಟ್ಟೆಗಳನ್ನ ಕೊಳ್ಳೋದನ್ನು ಬಿಟ್ಟು.... ...(ಕಾಲು ಹಿಡಿಯಲು) ಹೋಗುವನು).

ರಾಜ—(ಒದೆದು) Don't poke your nose into my affiars! You Bug Bear.

(ವಸಂತನು ನೆಲಕ್ಕುರುಳುವನು; ರಾಜಕುಮಾರನು ಜುಗುಪ್ಸಾಭಾವದಿಂದ ಒಳಕ್ಕೆ ಹೊರಟುಹೋಗುವನು.)

ನಾಲ್ಕನೆಯ ಪ್ರವೇಶ

[ಹುಲ್ಲು ಬೆಳೆದು ಮೈದಾನದ ಮೂಲೆ, ರಾಯರು ವಸಂತನನ್ನು ಮೈದಡವುತ್ತಿರುವರು.]

ರಾಯ—ವಸಂತಾ!

ವಸಂತ—ಅಪ್ಪಾ!

ರಾಯ—(ನಿಧಾನವಾಗಿ) ನಿನಗೆ ಮನಸ್ಸಿಗೆ ಸ್ವಲ್ಪವೂ ದುಃಖವಿಲ್ಲವೆ?

ವಸಂತ—ಯಾವ ವಿಚಾರಕ್ಕಾಗಿ ದುಃಖವಪ್ಪ ?

ರಾಯ—(ಸುಮ್ಮನಾಗಿ—ನಂತರ) ನಿನ್ನ ಮನಸ್ಸು ಈಗ ಹ್ಯಾಗಿದೆ ಹೇಳು.

ವಸಂತ—ಎಲ್ಲೋ ಸಂತೇಲಿ ನಿಂತಿರೋಹಾಗಿದೆ. ಕೇಳುತಿರೋ ಮಾತುಗಳೂ, ನೋಡುತಿರೋ ದೃಶ್ಯಗಳೂ ಒಂದು ಅರ್ಥವಾಗೊಲ್ಲ.

ರಾಯ—(ಕ್ಷಣಕಾಲಾನಂತರ) ಉಗಾದಿ ಹಬ್ಬದ ಹೆಸರನ್ನು ಕೇಳಿದರೆ ನಿನ್ನ ಮನಸ್ಸಿನಲ್ಲಿ ಏನಾಗುತ್ತೇ ?

ವಸಂತ—ದುಃಖವಾಗುತ್ತೆ.

ರಾಯ—(ಆಶ್ಚರ್ಯದಿಂದ ಅವನ ಮುಖವನ್ನು ನೋಡಿ) ಅದು ಯಾಕೆ ಮಗೂ ?

ವಸಂತ—ದೇಶದಲ್ಲೆಲ್ಲಾ ಲಕ್ಷಾಂತರ ರೂಪಾಯಿಗಳ ಪರದೇಶೀ ಬಟ್ಟೆಯ ಮಾರಾಟವಾಗಿ, ಅದರ ಹತ್ತರಷ್ಟು ಬೆಲೆಯ ಬಡತನ ದೇಶದೊಳಕ್ಕೆ ನುಗ್ಗಿ ಹಾಳಾಗುತೀವಲ್ಲಾಂತ.

ರಾಯ—(ಶೂನ್ಯದೃಷ್ಟಿಯಿಂದ) ನನಗೂ ಬಹು ಸಂಕಟವಾಗುವುದು.

ವಸಂತ—(ಆನಂದೋತ್ಸಾಹದಿಂದ) ಹಾಗಾದರೆ ನಾಳೆ ಹಬ್ಬಕ್ಕೆ ನೀನೂ ಖಾದೀ ಬಟ್ಟೇ ಕೊಂಡುಕೊಳ್ಳುತೀಯಾ ?

ರಾಯ—ಅದಕ್ಕಲ್ಲ ಮಗೂ .....(ಗದ್ಗದಿತನಾಗಿ) ನನಗೆ ಸಂಕಟವಾಗೋದು ಬೇರೇ ಕಾರಣದಿಂದ. ......
(ಕ್ಷಣಕಾಲಾನಂತರ ಮಾತುಗಳನ್ನು ತಡೆಯಲಾರದೆ) ವಸಂತಾ ! ನಿನಗೆ ಜ್ಞಾಪಕವಿದೆಯೆ.

ವಸಂತ—(ಭ್ರಮಿತನಾಗಿ) ಯಾವುದಪ್ಪ ?

ರಾಯ— (ಅವನ ಮುಖವನ್ನೇ ದುರದುರನೆ ನೋಡಿ ಕಣ್ಣೀರು ತಂದು) ಯಾವುದೂ ಇಲ್ಲ. (ಅವನನ್ನಪ್ಪಿ) ಮಗೂ ನೀನು ಹುಟ್ಟಿ ಇಪ್ಪತ್ತು ವರುಷವಾಯಿತಲ್ಲವೇ ?

ವಸಂತ—ಹೌದಪ್ಪ.

ರಾಯ—ನೀನು ಹುಟ್ಟಿದ ಒಂದು ತಿಂಗಳಿಗೆ ಒಂದು ಉಗಾದಿ ಬಂದಿತ್ತು. ....(ವಸ್ತ್ರದಿಂದ ಮುಖವನ್ನು ಮುಚ್ಚಿಕೊಳ್ಳುವನು.)

ವಸಂತ—ಇದು ಯಾಕಪ್ಪ ?

[ಇತ್ತಲಿಂದ ಮಂಜನು ಬಂದು ನಿಲ್ಲುವನು]

ರಾಯ—(ಮಂಜನ ಬರುವಿಕೆಯನ್ನರಿಯದೆ) ಆ ಉಗಾದಿ ಹಬ್ಬದ ದಿನ ನನ್ನ ಸ್ನೇಹಿತ

ಮಂಜ—(ಗಟ್ಟಿಯಾಗಿ) ಬುದ್ದೀ ೯೯೯ ....

ರಾಯ—(ಬೆಚ್ಚಿ) ಯಾರು ?

ಮಂಜ—ನಾನು ಬುದ್ದೀ, ಮಂಜ.

ರಾಯ—ಇಲ್ಲಿಗೇಕೆ ಬಂದೆ ?

ಮಂಜ—ತಮ್ಮನ್ನು ಕರಕೊಂಡೋಗಾಕೆ.

ರಾಯ—ಎಲ್ಲಿಗೆ ಮಂಜಾ ?

ಮಂಜ—ಇಲ್ಲೇ ಒಂದು ಕಡೆ ತುರ್ತಾಗಿ ಓಗಬೇಕು, ತಾವು ದಯ ಮಾಡಿಸಿದರೆ........

ರಾಯ—(ಪ್ರಜ್ಞೆ ಬಂದವನಂತೆ ಎಚ್ಚೆತ್ತು) ಮಗೂ ವಸಂತ! ಈ ಉಗಾದಿ ಹಬ್ಬದಲ್ಲಿ ನಿನ್ನ ಕೈಗೆ ಇಗೋ (ಜೇಬಿನಿಂದ ಚೆಕ್ ತೆಗೆದು) ಈ ನೂರು ರೂಪಾಯಿ ಕೊಟ್ಟಿದೇನೆ. ಇದಿಷ್ಟಕ್ಕೂ ಬಟ್ಟೆ ತಗೆದು ನಿನ್ನ ಮನಸ್ಸು ದಣಿಯೋ ಅಷ್ಟು ಬಡವರಿಗೆ ಹಂಚು. ಜೊತೇಲಿ ಆ ದಿನ ಬೆಟ್ಟನ ಕೇರಿಯೋರಿಗೆಲ್ಲಾ ಪಾಯಿಸದೂಟ ಮಾಡಿಸೋದಕ್ಕೆ ಏರ್ಪಾಟು ಮಾಡು. ಖರ್ಚಿಗೆ ನೀನು ಮನೇಲಿ ಕೇಳಿದ ಇಪ್ಪತ್ತೈದು ರೂಪಾಯನ್ನ ರಾಜೀ ಕೈಲಿ ಕೊಟ್ಟಿದೀನಿ; ತಗೋ ಇದರ ವಿಚಾರ ಮಟ್ಟಿಗೆ ಯಾರ ಕೈಲೂ ಹೇಳಬೇಡ. ಚಿಕ್ಕನ್ನ ಜೋಯಿಸರ ಹೆಸರಿನಲ್ಲಿ ಬರೆದಿದೀನಿ; ಅವರ ಮೂಲ್ಕಾನೇ ಕ್ಯಾಷ್ ಮಾಡಿಸಿಕೋ. ಯಾವ ತೊಂದರೆಯೂ ಇರೋದಿಲ್ಲ

ವಸಂತ—(ತಂದೆಯ ಪಾದಗಳನ್ನು ಹಿಡಿದು ಅವನ ಮುಖವನ್ನೇ ನೋಡುತ್ತಾ) ಅಪ್ಪಾ; ಆದಿನ,ಆಮ್ಮ ಹೇಳಿದ ಹಾಗೇ, ನಾನೇ ಧನ್ಯ.

ರಾಯ—ಮಂಜಾ! ವಸಂತನ ಮುಖವನ್ನ ಈಗ ನೋಡು· ಜ್ಞಾಪಕಕ್ಕೆ ಬರುತ್ತೆಯೋ ?

ಮಂಜ—ಬುದ್ದೀ ೯೯೯! ತಡವಾದರೆ........

(ರಾಯನು ಮಂಜನ ಮುಖವನ್ನು ನೋಡುವನು. ತಿಳಿದೆನೆಂಬಂತೆ ನಿಧಾನವಾಗಿ ತಲೆಯಾಡಿಸುವನು.)

ರಾಯ—(ವಸಂತನನ್ನೆಬ್ಬಿಸಿ) ನೀನು ಮನೆಗೆ ನಡಿ, ವಸಂತ!

[ವಸಂತನು ಸ್ವಲ್ಪ ಭ್ರಾಂತನಾಗಿ ಹೋಗುತ್ತಿರುವನು.]

ರಾಯ—ಮಗೂ! ಚೆಕ್ಕಿನ ವಿಚಾರ ...

ವಸಂತ—ಇಲ್ಲಪ್ಪಾ! ಎಚ್ಚರದಿಂದಿರುತೇನೆ.

[ನಿಷ್ಕ್ರಮಣ]

(ಕ್ಷಣಕಾಲ ಯಾರೂ ಮಾತನಾಡುವುದಿಲ್ಲ; ರಾಯನು—ವಸಂತನು ಕಣ್ಮರೆಯಾಗುವವರೆಗೂ ನೋಡುತ್ತಿರುವನು.)

ರಾಯ—(ದೃಷ್ಟಿಯನ್ನು ಕದಲಿಸದೆ) ಅದೇ ಮುಖ! ಅದೇ ನಡಿಗೆ! ಅದೇ ಸುಂದರವಾದ ನಿಷ್ಕಪಟ ದೃಷ್ಟಿ ...ಮಂಜಾ!

ಮಂಜ—ಬುದ್ದೀ! ಮನ್ನಿಸಬೇಕು. ನಾನು ಬರದಿದ್ದರೆ ತಾವು ಮನಸ್ಸನ್ನು ಸಡಿಲಾ ಬಿಟ್ಟು ಇವತ್ತೇನಾದರೂ ಆಗಿಬಿಡುತಿತ್ತು ....

ರಾಯ—ಮಂಜಾ! ಇಪ್ಪತ್ತು ವರುಷದಿಂದ ನನ್ನ ಎದೇಲಿ ಬೆಟ್ಟದ ಹಾಗೆ ಕೂತಿದೆ. ಈ ದಿನ ಸ್ವಲ್ಪ ಹಗುರವಾಯಿತು.

ಮಂಜ—ಬ್ಯಾಡಿ ಬುದ್ದೀ! ನಾವು ಸಂಗಟಾ ನುಂಗಾನಿ; ಆದರೆ ಆ ಅರೀದ ಕಂದಂಗೆ ..... ಈಗಲೇ ಹೇಳ್ಬಾಡೀ ಬುದ್ದೀ, ನಾನು ಸಾಯೋ ಕಾಲದೊರಗೂ ಇಂಗೇನೆ ಇದ್ದರೆ ಸಾಕು.

[ಕ್ಷಣಕಾಲ ಸುಮ್ಮನಿರುವನು.]

ರಾಯ—ಮಂಜಾ! ಉಗಾದಿ ಹಬ್ಬ-ಬಂತಲ್ಲವೇ?

ಮಂಜ—(ಕಣ್ಣುಗಳಲ್ಲಿ ನೀರು ತುಂಬಿ) ಬಂತೂ!

ರಾಯ—(ದುಃಖಾತಿಶಯದಿಂದ) ಜ್ಞಾಪಕ ಇದೆಯೇ?

ಮಂಜ—(ಕಣ್ಣೊರಸಿಕೊಂಡು) ಐತೇ ಬುದ್ದೀ! ದಯಮಾಡಿ; ತೋಟದ ಕಡೆಗೋಗಿ

ರಾಯ—ನಿನ್ನ ಸಂಗಡಲಾದರೂ ಈ ಮಾತುಗಳಾಡದೇ ಹೋದರೆ ನನ್ನ ಸಂಕಟ ಕಳೆಯೊಲ್ಲ ಕಣೋ....

ಮಂಜ—ಆಡೀ ಬುದ್ದೀ! ಕೇಳುತಾ ಇದ್ದರೆ ನನ್ನ ಸಂಕಟಾನೂ ಒಸಿ ಕಮ್ಮಿಯಾಗುತ್ತೈತೆ.

ರಾಯ—(ಮುಂದೆ ಹೋಗುತ್ತಾ) ಉಗಾದಿ ಹಿಂದಿನ ರಾತ್ರಿ ಅಮಾವಾಸ್ಯೆ ಕತ್ತಲು

ಮಂಜ—(ಹಿಂಬಾಲಿಸುತ್ತಾ) ಬನ್ನೂರು ತೋಟದ ಗಾರೆ ಮನೆ ಮಾಡೀಲಿ. ......

[ನಿಷ್ಕ್ರಮಣ]

ಐದನೆಯ ಪ್ರವೇಶ

[ರಾಯರ ಮಹಾಲಿನ ನಡುಮನೆ. ಎಲ್ಲಾ ಹಿಂದಿನಂತೆ; ಆದರೆ ಮಂಚ ಮಟ್ಟಿಗೆ ಮುಂದೆ ಬಂದಿದೆ. ಎರಡು ಕುರ್ಚಿಗಳು ಕಡಿಮೆಯಾಗಿವೆ. ರಾಜಮ್ಮನು ಮಂಚದ ಮೇಲೆ ಎಂದಿನಂತೆ ಕುಳಿತಿದಾಳೆ. ಮುಖದಲ್ಲಿ ಉದ್ವೇಗ, ದುಗುಡ. ಬಾಗಿಲ ಕಡೆಯೇ ನೋಡುತ್ತಿರುವಳು]

ಕಾಶಿ—(ಪ್ರವೇಶಿಸುವನು, ಮುಖದಲ್ಲಿ ನೀಚಕೃತ್ಯದ ಸಾಫಲ್ಯದ ಅಟ್ಟಹಾಸ) ಅಮ್ಮಾ! ಬರ್ತಾ ಇದ್ದಾರೆ.

ರಾಜಮ್ಮ—(ಬೆಚ್ಚಿ) ಎಲ್ಲಿ ?

ಕಾಶಿ—ಸ್ಕೂಲಿನ ಹತ್ತಿರ.

ರಾಜಮ್ಮ—ಕಾಶೀ !....

ಕಾಶೀ—ಅಮ್ಮಾ !

ರಾಜಮ್ಮ—(ಅಸಹಾಯತೆಯನ್ನು ತೋರಿ) ಇಲ್ಲ; ಈ ಕೆಲಸ ಯೋಗ್ಯವಲ್ಲ. ನನ್ನ ಮನಸ್ಸು ಯಾಕೋ ಹಿಂದೆಗೀತಾ ಇದೆ.

ಕಾಶೀ—ಅಮ್ಮ! 'ಎಣ್ಣೆ ಬರುವಾಗ ಕಣ್ಣು ಮುಚ್ಚಿಕೊಂಡರೂ, ಅನ್ನೋ ಹಾಗೆ' ಈಗ ನೀವು ಮನಸ್ಸನ್ನ ಸೋಲುತಾರೆಯೇ! ಅಂಥ ಮಾಡಬಾರದ ಕೆಲಸ ಏನಮ್ಮ? ನೀವಲ್ಲದೆ ಇನ್ಯಾರಾದರೂ ಆಗಿದ್ದರೆ, ಒಂದು ದಿನ ಕೂಡ ಇದನ್ನ ಸುಧಾರಿಸುತಾ ಇರಲಿಲ್ಲ, ಇದು ಬೆಳೆದು ಇಷ್ಟು ಪ್ರಬಲವಾಗುತಲೂ ಇರಲಿಲ್ಲ. ನೂರಾರು ರೂಪಾಯಿನಂತೆ ರಾಜಕುಮಾರರ ಹಣ ಯಾವನೋ ಹೊರಗಿನವನಿಂದ ಹೊಲೇರು ಮಾದಿಗರ ಪಾಲಾಗುತಿದ್ದರೆ, ಕುಮಾರರ ತಾಯೀನೇ ನೋಡುತಾ ಸುಮ್ಮನೆ ಕೂತಿರುತಾರೆಯೇ! ಆ

ಚೆಕ್ಕಿನ ವಿಚಾರ ನೀವೇ ಅವರನ್ನ ಕೇಳಿ ನೋಡಿ. ಅಲ್ಲಮ್ಮಾ! ನಿಮ್ಮ ಹೊಟ್ಟೇಲಿ ಹುಟ್ಟಿದ ಮಗನ ಭವಿಷ್ಯಾನ ಮರೆತು ಕೂಡೋದೇ? ನೀವೇನು ಕಂಡೋರಾಸ್ತಿ ಕದೀತಿದೀರೋ? ಇಲ್ಲ, ವಂಚನೆಮಾಡಿ ಕಸುಗೊಳ್ಳುತಿ ದೀರೋ! ಮುಂದೆ ನಿಮ್ಮ ಮಗನಿಗೆ ಅವನ ಪಿತ್ರಾರ್ಜಿತ ಸ್ವತ್ತಿನ ಭೋಗ ದಲ್ಲಿ ಭಂಗ ಬರದ ಹಾಗೆ ಎಚ್ಚರಿಕೆಯಾಗಿದೀರಿ. ಇದಕ್ಕೆ ಅಷ್ಟು ಅನು ಮಾನಿಸಬೇಕಾದ್ದೇನಮ್ಮ? ನನಗೆ ತಿಳಿಯಲಿಲ್ಲ. ಅಲ್ಲದೆ ರಾಯರು ಊರಿ ನಲ್ಲಿಲ್ಲ, ಮಂಜನಿಗೆ ಸಾಯೋ ಖಾಯಿಲೆ. ಇಂಥ ಒಳ್ಳೆಯ ಸಂದರ್ಭ ಬಿಟ್ಟರೆ

ರಾಜಮ್ಮ— (ಹೃದಯ ವೇದನೆಯಿಂದ) .. ಆದರೂ....ಕಾಶೀ! ನಿನಗೆ ಅವನ ವಿಚಾರದಲ್ಲಿ ಸ್ವಲ್ಪವೂ........

ಕಾಶಿ—ಅಮ್ಮಾ! ಇದರಿಂದ ನನಗಾಗಬೇಕಾದ್ದೇನೂ ಇಲ್ಲ. ನೀವು ಪ್ರಪಂಚದಲ್ಲಿ ಇಲ್ಲದ ರೀತಿ ನಡೆಯೋದನ್ನ ನೋಡಿ, ಕುಮಾರರ ಮೇಲಿನ ಪ್ರೀತಿಯಿಂದ ಹೇಳಿದೆ........ಅವರ ಹಣೇಲಿ........

(ಹೊರಗಡೆ ಹೆಜ್ಜೆ ಸಪ್ಪಳ)

ಅಮ್ಮಾ! ಬಂದರು ನಾನು ಒಳಕ್ಕೆ ಹೋಗುತೀನಿ. ಇಗೋ ಸ್ಟ್ಯಾಂಪ್ ಕಾಗದ, ಪೇನಾ. ಕುಮಾರರ ಮೇಲೆ ದಯವಿರಲಿ....(ಒಳಕ್ಕೆ ಹೋಗು ವನು).

(ಇತ್ತಲಿಂದ ವಸಂತನು ಎಂದಿನಂತೆ ಹಸನ್ಮುಖಿಯಾಗಿ ಪ್ರವೇಶಿಸು ವನು. ತಟ್ಟನೆ ರಾಜಮ್ಮನು ಕಾಗದ, ಪೇನಾವನ್ನು ಮರೆಮಾಡುವಳು.)

ವಸಂತ—(ತಾಯಿಯ ಪಾದದ ಬಳಿ ಬಂದು ಕುಳಿತು) ಅಮ್ಮಾ! ಏನು ಪುನಃ ತಲೆನೋವು ಬಂತೇ? ಇದು ಯಾಕೆ ಕಣ್ಣುಗಳು ಕೆಂಪಾಗಿವೆ?

ರಾಜಮ್ಮ—ಮಗೂ! ಈಚೆಗೆ ಕೆಲವು ಸಂಗತಿಗಳಿಂದ ' ನಿನಗೆ ನಿಜ ವಾಗಿಯೂ ನನ್ನ ಮೇಲೆ 'ಮಾತೃಭಕ್ತಿ' ಇಲ್ಲ. ನಿನ್ನ ನಡತೆಯೆಲ್ಲಾ ನಟ ನೇಂ'ತ ತೋರುತಾಬಂತು.... .

ವಸಂತ—(ದುಃಖದಿಂದ) ಅಮ್ಮಾ!........

ರಾಜಮ್ಮ— ಯಾರ ಹತ್ತಿರಲೂ ಹೇಳಿಕೊಳ್ಳಲಾರದೆ ಒಳಗೇ ಕುದೀತಾ ಇದೀನಿ. ಇದರಿಂದ ನನ್ನ ಸಂಕಟ ಹೆಚ್ಚಿದೆ.

ವಸಂತ—(ಆಕೆಯ ಪಾದಗಳನ್ನಪ್ಪಿ) ಅಮ್ಮಾ! ಈ ಪಾದಗಳಾಣೆಗೂ ನಿನ್ನ ಊಹೆ ತಪ್ಪು. ಇದು ಯಾಕಮ್ಮ ನಿನಗೆ ನನ್ನ ವಿಚಾರದಲ್ಲಿ ಹೀಗೆ ತೋರುತಾ ಇದೆ? .. ನನ್ನ ಅನಿಷ್ಟ ದಿನಗಳು ಆರಂಭವಾಗಿರಬೇಕು.... ಅಮ್ಮಾ ನನ್ನ ಮೇಲೆ ಯಾವ ಅಪವಾದ ಬಂದರೂ ಹೊರಬಲ್ಲೆ. ಆದರೆ ಈ ಅಪವಾದ ಮಾತ್ರ ಅಸಹನೀಯ ಅಮ್ಮಾ! ನನಗೆ ಈ ಪ್ರಪಂಚದಲ್ಲಿ ಎಲ್ಲಾ ದಕ್ಕಿಂತ ಪ್ರಿಯವಾದ ಪೂಜ್ಯವಾದ ವಸ್ತು ನನ್ನ ತಾಯಿಯಾದ ನೀನೂಂತ ನಾನು ಕನಸುಮನಸಗಳಲ್ಲಿಯೂ ನೆನೆಸದೇ ಬಾಳುತಿರೋ ಪಕ್ಷಕ್ಕೆ, ನನ್ನ ಬಾಳು ಈ ಕ್ಷಣವೇ ಕೊನೆಯಾಗಲೀ ....ಅಮ್ಮಾ!

[ದೈನ್ಯದಿಂದ ನೋಡುವನು. ಕಣ್ಣುಗಳಲ್ಲಿ ನೀರು ತುಂಬುವುದು.]

ರಾಜಮ್ಮ (ಅವನ ತಲೆಯನ್ನು ನೇವರಿಸುತ್ತಾ) ವಸಂತಾ! ನನ್ನೀ ಮಾತು ಸತ್ಯವಾದರೆ ನಾನು ಈಗ ಹೇಳಿದಂತೆ ಕೇಳುತೀಯಲ್ಲವೇ?

ವಸಂತ—ಈ ಪಾದದಾಣೆಗೂಮ್ಮ.

ರಾಜಮ್ಮ—ಮಗೂ! ಉಗಾದಿಯ ಹಬ್ಬದ ಖರ್ಚಿಗಾಗಿ ನಿಮ್ಮಪ್ಪ ನಿನಗೆಷ್ಟು ರೂಪಾಯಿ ಕೊಟ್ಟರು?

ವಸಂತ—(ಸಿಡಿಲು ಬಡಿದವನಂತೆ .. ಈ ಪ್ರಶ್ನಗೆ ಉತ್ತರ ಹೇಳಲೇ ಬೇಕೇಮ್ಮ?

ರಾಜಮ್ಮ—(ಕುಪಿತಳಾಗಿ) ನನ್ನಿಂದ ಬಚ್ಚಿಡಬೇಕಾದ ವಿಚಾರಗಳೂ ನಿನ್ನಲ್ಲಿವೆಯಲ್ಲವೇ?

ವಸಂತ—ಇಲ್ಲಮ್ಮ, ಇದೊಂದು ಮಾತು ಮಟ್ಟಿಗೆ.....

ರಾಜಮ್ಮ—ವಸಂತಾ ೨ಾ!

ವಸಂತ—ಕ್ಷಮಿಸಮ್ಮ! ಅಪ್ಪ ಅದೇಕೆ ಹಾಗೆ ಹೇಳಿದರೋ ಕಾಣೆ! ಆದರೆ ನಿನಗೂ ತಿಳಿಸಬಾರದೂಂತ ಅವರು ಹೇಳಲಿಲ್ಲ.

ರಾಜಮ್ಮ—ಹೇಳು, ಹೇಳು

ವಸಂತ—ನೂರು ರೂಪಾಯಿಗೆ ಒಂದು ಚೆಕ್ಕು ಕೊಟ್ಟು. ಅದರಿಂದ ಬಟ್ಟೆಗಳನ್ನು ಕೊಂಡು ಕೇರಿಯ ಮಕ್ಕಳು ಮರಿಗಳಿಲ್ಲರಿಗೂ ಹಂಚೋ ಹಾಗೆ ಹೇಳಿದರು. ಅದರಂತೆ ಮಾಡಿದೆ. ಆ ದಿನ ಆ ಕೇರಿಜನರಾನಂದ ನೀನು ನೋಡಿದ್ದಿದ್ದರೆ........

ರಾಜಮ್ಮ—ಚಿಕ್ಕನ್ನ ನಿನ್ನ ಹೆಸರಿನಲ್ಲಿ ಬರೆದುಕೊಟ್ಟಿದ್ದರೋ?

ವಸಂತ—(ಹಿಂದುಮುಂದು ತಿಳಿಯಲಾರದೆ) ಇಲ್ಲಮ್ಮಾ, ಜೋಯಿಸರ ಹೆಸರಿನಲ್ಲಿ ಕೊಟ್ಟಿದ್ದರು.

ರಾಜಮ್ಮ—(ಉಕ್ಕಿ ಬರುವ ಕ್ರೋಧವನ್ನು ತಡೆದು) ಜೊತೆಗೆ ನನ್ನಿಂದ ಬೇರೆ ಇಪ್ಪತ್ತೈದು ರೂಪಾಯಿ ತಗೊಂಡೆಯಲ್ಲವೇ?

ವಸಂತ—ಹೌದಮ್ಮ. ಅದರಿಂದ ಹಬ್ಬದ ದಿನ, ಕೇರಿಯೋರೆಲ್ಲರಿಗೂ ಪಾಯಸದೂಟ ಮಾಡಿಸಿದೆನಮ್ಮ.

ರಾಜಮ್ಮ—ಹಾಗಂತ ನಿಮ್ಮ ತಂದೆ ಹೇಳಿದ್ದರೋ?

ವಸಂತ—ಹೌದಮ್ಮ, ಅಪ್ಪನೇ ಹೇಳಿದ್ದರು.

ರಾಜಮ್ಮ—(ಸಮಾಧಾನಕ್ಕೆ ಬರುತ್ತಾ ಕೃತ್ರಿಮದ ನಗುವನ್ನು ಬೀರಿ) ಮಗೂ! ಈ ವಿಚಾರಗಳನ್ನು ನನ್ನಿಂದ ಗುಟ್ಟಾಗಿಟ್ಟಿರೋದನ್ನ ನೋಡಿ ನಿನ್ನ ಮಾತೃಭಕ್ತೀಲಿ ನನ್ನ ನಂಬಿಕೆ ಸಡಲಿತು.

ವಸಂತ—ಇಲ್ಲಮ್ಮ! ನಿನ್ನಿಂದ ಈ ವಿಚಾರಾನ ಮುಚ್ಚಿಡಬೇಕೂಂತ ದೇವರಾಣೆಗೂ ನನ್ನಿಷ್ಟವಲ್ಲ.. ..

ರಾಜಮ್ಮ—ಇರಲಿ, ಈಗ ನನ್ನ ಮನಸ್ಸಿನಲ್ಲಿ ಹುಟ್ಟಿರೋ ಶಂಕೆ ದೂರವಾಗಬೇಕಾದರೆ ನೀನೀಗೊಂದು ಕಠಿಣವಾದ ಪರೀಕ್ಷೇಲಿ ಪಾಸ್ ಆಗಬೇಕು.

ವಸಂತ—ಆಗಲಮ್ಮ, ಶಿರಸಾವಹಿಸಿ.

ರಾಜಮ್ಮ—ನೋಡು ಮಗೂ! ನೀನು ಗಾಂಧಿ. ಖಾದಿ–ಸರ್ಕಾರ-ಹಾಗೆ ಹೀಗೆಂತ ಇಪ್ಪತ್ತುನಾಲ್ಕು ಘಂಟೆ ಓಡಾಡುತಿದೀಯ. ಪೋಲೀಸಿನೋರು ನಿನ್ನ ಹಿಂದೆ ಮುಂದೆ ಎಲ್ಲಾ ತಿರುಗುತಾ ಇದಾರೆ. ಹೌದೇ?

ವಸಂತ—ಹೌದಮ್ಮ.

ರಾಜಮ್ಮ—ನಾಳೆ ನಿನ್ನನ್ನ ಯಾವುದಾದರೂ ನೆಪದಲ್ಲಿ ಕೋರ್ಟಿಗೆಳೆದು ದಂಡ ಹಾಕಿದರೆ, ಸೀದ ನಮ್ಮೀ ಆಸ್ತಿಮೇಲೆ ನುಗ್ಗಿಬಿಡುತಾರೆ ಸರ್ಕಾರದೋರು .ಅಲ್ಲವೇ?

ವಸಂತ ನುಗ್ಗಬಹುದು.

ರಾಜಮ್ಮ—ಅದಕ್ಕೋಸ್ಕರ, ನಿನಗೆ ನಿಜವಾಗಿಯೂ ನಿನ್ನ ತಾಯಿ

ಯಾದ ನನ್ನಲ್ಲಿ ಗೌರವವಿದ್ದರೆ ಇದೊಂದು ನನ್ನ ಸಣ್ಣಮಾತು ನಡೆಸಿ ಕೊಡು. (ಕಾಗದ ಪೇನಾ ಮುಂದಿಟ್ಟು) ಇದರಲ್ಲಿ ಟೈಪಾಗಿರೋದನ್ನ ಓದಿ ಕೆಳಗೆ ರುಜುಮಾಡು.

(ವಸಂತನು ಮೊದಲಿನಿಂದ ಕಡೆಯವರೆಗೂ ಓದಿ ರುಜುಮಾಡಲು ಹೋಗುವನು.)

ರಾಜಮ್ಮ—(ತಡೆದು) ಪೂರ್ತಿ ಓದಿದೆಯಾ ?

ವಸಂತ ಓದಿದೆನಮ್ಮಾ!

ರಾಜಮ್ಮ—ರುಜು ಮಾಡುತೀಯಾ ?

ವಸಂತ—ಮಾಡುತೀನಮ್ಮ.

ರಾಜಮ್ಮ—ಸಂತೋಷದಿಂದ ?

ವಸಂತ—ಆನಂದದಿಂದ. (ರುಜುಮಾಡಿ) ಅಮ್ಮಾ! ನನಗೆ ಹಣ ಕಾಸು ಬೇಕಾದರೆ ಕೊಡೋದಕ್ಕೆ ನನ್ನನ್ನು ಹೆತ್ತು ಹೊತ್ತು ಸಾಕಿದ ನೀನೂ ಅಪ್ಪನೂ ಇರೋವಾಗ ನನ್ನ ಹೆಸರಿನಲ್ಲಿ ಆಸ್ತಿಯೇಕೆ. ಅಲ್ಲದೆ ಆಜೀವವೂ ಇದೇರೀತಿ ಒಬ್ಬನೇ ನಿಮ್ಮ ಸೇವೆಮಾಡಿಕೊಂಡಿರಬೇಕೂಂತ ಸಂಕಲ್ಪಿಸಿರೋ ನನಗೆ, ಹಣಕಾಸಿನ ಅವಶ್ಯಕತೆ ತಾನೇ ಏನೂ ? ಅಮ್ಮಾ! ನಾನು ಸಂತೋಷದಿಂದ ರುಜುಮಾಡಿದೇನೆ. (ಕೊಡುತ್ತಾ) ತೆಗೆದುಕೋ. ರಾಜನಿಗೆ ಹೆಣ್ಣು ಗೊತ್ತುಮಾಡಿ, ಈ ಆಸ್ತಿ ಎಲ್ಲಾನೂ ಅವನ ಹೆಸರಿಗೆ ರಿಜಿಷ್ಟರ್‌ಮಾಡಿಸಿ ಅಧ್ವೈರ್ಯರ್ಯವಾಗಿ ಮದುವೆಮಾಡೋಣ. ಅವರು ಗಂಡ ಹೆಂಡತಿ ಸುಖವಾಗಿರೋದನ್ನ ನೋಡಿ ನಿನಗೆ ಅಪ್ಪನಿಗ ಎಷ್ಟು ಆನಂದ! ನೀವಿಬ್ಬರೂ ಅನಂದದಿಂದಿರೋದನ್ನ ನೋಡೋ ನನಗಿಂತಲೂ ಭಾಗ್ಯವಂತ ರಿನ್ನಾ್ಯರು!........ಅಮ್ಮಾ! ನೀನೇ ನನ್ನ ಜೀವ! ನನ್ನ ಹೃದಯದ ಮಂಗಳಮೂರ್ತಿ........ನನ್ನ ಇಹಪರ ದೇವತೆ!

[ಪಾದಗಳಿಗೆ ನಮಸ್ಕರಿಸುವನು]

ರಾಜಮ್ಮ—(ನುಗ್ಗುತ್ತಿರುವ ಪಶ್ಚಾತ್ತಾಪದ ಅಲೆಗಳನ್ನು ತಡೆದು) ಕಂದಾ! ವಸಂತಾ! ನೀನೇ ಧನ್ಯ! ದೇವರು ನಿನಗೆ ಸದಾ ಸಹಾಯಕನಾಗಿರಲಿ

ವಸಂತ—ಅಮ್ಮಾ! ಹೊರಡಲೇ! ಮಂಜನ್ನ ನೋಡಬೇಕು! ಅವನಿಗ ಜ್ವರ ಬಹಳ ಹೆಚ್ಚಿದೆ.

ರಾಜಮ್ಮ—ಹೋಗು ಮಗೂ! ಅವನಿಗೆ ಹ್ಯಾಗಿದೇನ್ನೋದನ್ನ ಬಂದು ಹೇಳು.

ವಸಂತ—ಆಗಲಮ್ಮ

[ವಸಂತನು ನಿಷ್ಕ್ರಮಿಸುವನು]

ರಾಜಮ್ಮ—(ಅವನು ಹೋದಕಡೆಯೇ ನೋಡುತ್ತಾ ಕಂಬನಿ ದುಂಬುವಳು. ಒಳಗಿನಿಂದ ಕಾಶಿ ಬಂದು ನಿಲ್ಲುವನು) ಕಾಶೀ! ಕಾಶೀ! ನನ್ನ ಕೈಯಿಂದ ಎಂತಹ ಚಂಡಾಲ ಕೃತ್ಯಾನ ಮಾಡಿಸಿದೆಯೋ!!........ (ಬಿಕ್ಕುತ್ತಾ ಪರವಶಳಾಗಿ ಮಂಚದಮೇಲೆ ಉರುಳುವಳು).

ಆರನೆಯ ಪ್ರವೇಶ

[ಪಾರ್ಕಿನ ಒಂದು ಭಾಗ. ಮರದ ಕೆಳಗಡೆ ಒಂದು ಬೆಂಚಿನಮೇಲೆ ರಾಜಕುಮಾರನು ಕೈಲಿ ಬ್ಯಾಟು ಹಿಡಿದು ಕುಳಿತಿದಾನೆ. ಪಕ್ಕದಲ್ಲಿ ಹ್ಯಾಟು ಬಿದ್ದಿದೆ. ಮುಖದಲ್ಲಿ ಪ್ರಜ್ವಲಿಸುವ ಕ್ರೋಧ. ಇತ್ತ ಎದುರಿಗೆ ಕಾಶಿ ಪರಟು ಕೋಟು ಧರಿಸಿ, ತಲೆಯಮೇಲೆ ಒಂದು ಚೌಕವನ್ನು ಮುಸುಗಿಟ್ಟು ನಿಂತಿದಾನೆ.]

ರಾಜ—ಆ ದಿನ ಆ ಷ್ಯಾಂಪೇನ್ ಬಾಟಲು ಅಮ್ಮನ ಕೈಗೆ ಹ್ಯಾಗೆ ಸಿಕ್ಕಿತು?

ಕಾಶಿ—ತಮ್ಮಣ್ಣಂದಿರಾದ ವಸಂತರಾಯರು ತೆಗೆದು ತೋರಿಸಿದರು.

ರಾಜ—(ಹಲ್ಲು ಕಡಿಯುತ್ತಾ) Rascal!

ಕಾಶಿ—ಅಮ್ಮಾ ಅವರು ರೈಲಿಗೆ ಹೊರಡುವಾಗ 'ಕುಮಾರ ತನ್ನ ತಪ್ಪುಗಳನ್ನೆಲ್ಲಾ ಒಪ್ಪಿಕೊಂಡು. ಪ್ರಾಯಶ್ಚಿತ್ತ ಮಾಡಿಕೊಂಡು ಒಂದು ವಾರದಲ್ಲೇ ಮದುವೆ ಮಾಡಿಕೊಳ್ಳುತೀನೀಂತ ಆಣೆ ಇಟ್ಟು ಹೇಳಿದರೆ ನಾನು ಪುನಃ ಬರ್ತೀನೆ. ಇಲ್ಲದಿದ್ದರೆ ನಾನು ಅಲ್ಲೇ ನಮ್ಮಣ್ಣನ ಮನೇಲೇ ಇದ್ದು ಬಿಡುತೇನೆ'ಂತ ಹೇಳಿದರು.

ರಾಜ—ಅಪ್ಪೇನು ಹೇಳಿದ?

ಕಾಶಿ—ಸುಮ್ಮನಿದ್ದರು. ರಾಯರು ಮೊನ್ನೆ ಹಿಂದೂಪುರದಿಂದ

ಅಮ್ಮಾವರನ ಬಿಟ್ಟು ವಾಪಸು ಬರುತಾನೇ ಎದೆ ನೋವೂಂತ ಮಲಗಿದಾಗ ತಮ್ಮಣ್ಣ ಕೂಗಿದರು. ನಾಲ್ಕಾರು ಸಲ ನಾನು ಹೋಗಿ ಏನೋ ಹೇಳಿ, ಅಮೇಲೆ ಡಾಕ್ಟರನ ಕರಕೊಂಡು ಬಂದೇ. ಔಷಧಿ ಕೊಡುತಾ ಇದಾರೆ. ತಂತೀ ಕೊಟ್ಟು ಅಮ್ಮಾವರನ್ನ ಕರೆಸಿಬಿಡಬೇಕೂಂದರೆ ರಾಯರು ಬೇಡಾಂತಾರೆ. ಈ ಮಧ್ಯೆ ಅಮ್ಮಾ ಅವರು ಊರಲ್ಲಿರೋ ವರೆಗೂ ಮರಳೀ ಹಾಗೆ ಬಂದಿರಿತಿದ್ದೋರು, ಈಗ ಆ ಮಂಜನ್ನ ಬಿಟ್ಟು ಕದಲೋದೇ ಇಲ್ಲ. ನಿನ್ನೆ ರಾತ್ರಿ ಏನೋ ಹತ್ತುಗಂಟೆಯಿಂದ ರಾಯರ ಹತ್ತಿರ ಒಂದು ಘಂಟೆ ಕೂತಿದ್ದರು ...

ರಾಜ—ಯಾರು ಕೂತಿದ್ದರು ?

ಕಾಶೀ—(ವ್ಯಂಗವಾಗಿ) ಅವರೇ ಸ್ವಾಮೀ, ತಮ್ಮಣ್ಣನವರಾದ...

ರಾಜ—(ಕಿಡಿಯಾಗಿ, ಕಾಶಿ ಕಪಾಳಕ್ಕೆ ತೀಡಿ) Scamp! ಹಗಲೆಲ್ಲಾ ನಮ್ಮಣ್ಣಾಂತ ಆ ಸೂಳೀಮಗ Scoundrelನ ಹೆಸರೆತ್ತ ಬೇಡ; (ಅವನ ಕಡೆಯೇ ದುರುಗುಟ್ಟಿಕೊಂಡು ನೋಡುತ್ತಾ) ನಿನ್ನ ಮನಸ್ಸಿನ ಅಭಿಪ್ರಾಯ ನನಗೆ ಈಗ ಗೊತ್ತಾಯಿತು. ನಿನಗವನಮೇಲೆ ಈ ಕಾರಣದಿಂದ ಬದ್ಧದ್ವೇಷ ಅಲ್ಲವೇ ?

ಕಾಶಿ—(ಕೆನ್ನೆ ಮುಟ್ಟಿ ನೋಡಿಕೊಳ್ಳುತ್ತಾ ರೇಗಿ) ಅಲ್ಲವೇ ಸ್ವಾಮೀ! (ಗಟ್ಟಿಯಾಗಿ) ಯಾವೋಳೋ ರಂಡೇಲಿ ಹುಟ್ಟಿ..... .

ರಾಜ—(ಅವನ ಬಾಯಿಯಮೇಲೆ ಕೈಯಿಟ್ಟು) ಕತ್ತೇ! ಕಿರಚಬೇಡ! (ಕೈಹಿಡಿದು ಕಾಲಬಳಿ ಕೂರಿಸುತ್ತಾ) ಕುಕ್ಕರಿಸು! ....ಕಾಶೀ! ನೀನು ನನ್ನ ಮೇಲಿನ ಪ್ರೇಮದಿಂದ ಈ ಸಾಹಸಮಾಡಿದೆಯೋ, ಇಲ್ಲ, ಬರೀ ಅವನ ಮೇಲಿನ ದ್ವೇಷದಿಂದ ಮಾಡಿದೆಯೋ ? ಅದು ಹೇಗಾದರೂ ಇರಲಿ....

ಕಾಶಿ—ನಿಮ್ಮ ಮೇಲಿನ ಪ್ರೇಮದಿಂದಲ್ಲದಿದ್ದರೆ ಅಷ್ಟು ಕಷ್ಟಪಟ್ಟು " ಆಸ್ತಿ ನನಗೆ ಬೇಡಾಂತ" ಬರೆಸುತಿದ್ದೆನೇ ಸ್ವಾಮೀ ?

ರಾಜ—ಅದು ಹೋಗ್ಗಲಿ; ನೀ ಬರೆಸಿಕೊಳ್ಳದಿದ್ದರೂ ಈ ರಹಸ್ಯ ನನಗೆ ಪತ್ತೆಯಾದಮೇಲೆ ಒಂದು ಕುರುಡ ಕಾಸೂ ಅವನಿಗೆ ದಕ್ಕುತ್ತಿರಲಿಲ್ಲ. ಈಗ ನೋಡು, ಕಾಶಿ, ಅಮ್ಮಾ ಊರಿನಲಿಲ್ಲ. ನಿನಗೆದೆ ಇದ್ದರೆ ಇನ್ನೊಂದು ದೊಡ್ಡ ಸಾಹಸದ ಕೆಲಸಮಾಡಬಹುದು. ಆದರೆ ಅದು ನಿನ್ನಂಥ Idiot

of a Brahmin Cookನಿಂದ ಸಾಧ್ಯವಲ್ಲ; European Butlers ಆಗಿದ್ದರೆ, ಬಾಳೆಹಣ್ಣು ಸುಲಿದಷ್ಟು ಸುಲಭವಾಗಿ ಮಾಡು ತಿದ್ದರು.

ಕಾಶಿ—(ಉತ್ಸಾಹದಿಂದ) ಹೇಳೀ ಸ್ವಾಮೀ! ಅದೆಂತಹ ಕಠಿಣವಾದ ಕೆಲಸವೇ ಆಗಲಿ ... ...

ರಾಜ—No fears! (ಯೋಚಿಸುತ್ತಿರುವನು.)

ಕಾಶಿ—ಸ್ವಾಮಿ! ದೇವರಾಣೆಗೂ........

ರಾಜ—shut up! (ಯೋಚನೆ).

[ಕ್ಷಣಕಾಲಾನಂತರ]

ರಾಜ— (ಮನಸ್ಸಿಗೆ ಏನೋ ಹೊಳೆಯುವುದು. ಗೆದ್ದವನಂತೆ ಸಂತೋಷಭರದಿಂದ ಕಾಶಿಯ ಮೂತಿಯನ್ನು ತನ್ನ ಕಡೆ ತಿರುಗಿಸಿ) ಕಾಶೀ! ಕೇಳು! ನಾನು ಹುಟ್ಟಿದಂದಿನಿಂದ ನನ್ನನ್ನು ಈ ರಹಸ್ಯದ ವಿಚಾರದಲ್ಲಿ ವಂಚಿಸಿಟ್ಟಿದ್ದ ತಂದೆತಾಯಿಗಳನ್ನ ಆಮೇಲೆ ವಿಚಾರಿಸಿಕೊಳ್ಳುತೇನೆ.

ಕಾಶಿ—(ಬೆದರಿ) ಸ್ವಾಮೀ!

ರಾಜ—shut up! ನೀನೂ ಕೂಡ ಈ ಹೊಲಸನ್ನೇ ಬಚ್ಚಿಟ್ಟದ್ದೆ —ನನ್ನ ಮೇಲಣ ಪ್ರೇಮದಿಂದ! (ವ್ಯಂಗ್ಯದ ನಗು).

ಕಾಶಿ—(ದೈನ್ಯದಿಂದ) ಸ್ವಾಮೀ! ಇದೇಕೆ ... . .

ರಾಜ—ಕೇಳೂ! ಇನ್ನುಮುಂದೆ ನನ್ನ ಆಳಿಕೆ. ನನ್ನ ಅಪ್ಪಣೆ ಯಂತೆ ಎಲ್ಲಾ ನಡೆಯಬೇಕು. ಮೊದಲು ಈ ಹಳೇ ಹೊಲಸು, ಮನೆ ಯಿಂದ ಹೊರಬಿದ್ದು ಮನೆ ಶುದ್ಧವಾಗಬೇಕು. ನಿನಗೆ ಅಪ್ಪನದೊಂದು, ಆ ಚಂಡಾಲನದೊಂದು ಫೋಟೋ, ಜೊತೆಗೆ ಒಂದು article, ಇಪ್ಪತ್ತೈದು ರೂಪಾಯಿಚೆಕ್ಕು ಕೊಡುತೀನಿ. ಎಚ್ಚರಿಕೆಯಿಂದ ತಗೊಂಡು ಹೋಗಿ ದೊಡ್ಡ ಪೋಸ್ಟಾಫೀಸಿನೆದುರಿಗಿರೋ ಪೇಪರಾಫೀಸಿನಲ್ಲಿ ಕೊಟ್ಟು ರಸೀತಿ ತರಬೇಕು

ಕಾಶಿ—(ಕೈ ಕೈ ಹಿಸುಕಿಕೊಳ್ಳುತ್ತಾ) ಇದೆಲ್ಲಾ ಯಾಕೆ ಸ್ವಾಮಿ!

ರಾಜ—ನಮ್ಮಪ್ಪ, ಈ loafer ಯಾರೂ, ಎಂಥೋರೂ ಅನ್ನೋ

ದನ್ನ ಜಗತ್ತಿಗೇ ತಿಳಿಸೋದಕ್ಕೆ. ನಾಳೆ ಬೆಳಿಗ್ಗೆವೇಳೆಗೆ ದೇಶದಲ್ಲೆಲ್ಲಾ ಈ ವಿಚಾರ ಹರಡಿರಬೇಕು. ನಂತರಾ ....(ವಿಜಯಾನಂದ)

ಕಾಶೀ—ಸ್ವಾಮಿಾ ! .... (ಬೇಡಿಕೆ) ರಾಯರ ಹೆಸರು ....

ರಾಜ—(ಕಿಡಿಯಾಗಿ) Scamp of a father. ನಾನು ನನ್ನ Friend Miss Lissy ಜೊತೇಲಿ ಒಂಭತ್ತು ಘಂಟೇವರೆಗೂ walking ಹೋಗಿದ್ದೆನಂತೆ. ಅಷ್ಟಕ್ಕೇ ಕುಲಮರ್ಯಾದೆ, ವಂಶದ ಮರ್ಯಾದೆ ಮೇಲೆ Sermon ನನಗೆ! A world of rogues and thugs!

ಕಾಶಿ—(ಭಯದಿಂದ ನಡುಗುತ್ತಾ) ಸ್ವಾಮಿಾ! ಇಷ್ಟು ದುಡಕಬೇಡೀ. ಸ್ವಲ್ಪ ನಿಧಾನಿಸಿ.. .. ..

ರಾಜ (ರೇಗಿ) ಕತ್ತೇ! ನೀನು ನನಗೆ Sermonising! shut up! ನಿಧಾನಿಸಬೇಕಾಗಿದ್ದಿದ್ದರೆ, ಇಷ್ಟು ದಿನಗಳೂ ನನಗೆ ಮೋಸಮಾಡಿ, ವಂಚಿಸಿ ಬಚ್ಚಿಟ್ಟಿದ್ದ ಗುಟ್ಟನ್ನ ಬಿಚ್ಚಿ ಹೇಳೋದಕ್ಕೆ ಈ ದಿನಾನೇ ಏಕೆ ಆರಿಸಿದೆ ?

ಕಾಶಿ— ಸ್ವಾಮಿಾ! (ದೀನನಾಗಿ) ರಾಜಕುಮಾರರೇ!

ರಾಜ—(ಅವನ ಬೆನ್ನು ತಟ್ಟಿ) ಕಾಶೀ! ಬಾ! ಇನ್ನು ಮುಂದೆ ನಾನು ರಾಯರು. ನೀನು ನನ್ನ Private Secretary........ನಡೀ! ಹೊತ್ತಾಗುತ್ತೆ!

[ರಾಜಕುಮಾರನು ಮುಂದೆ ಹೋಗುವನು. ಪಶ್ಚಾತ್ತಾಪದ ಮುಖ ಮಾಡಿಕೊಂಡು ಕಾಶಿ ಹಿಂಬಾಲಿಸುವನು.]

ಏಳನೆಯ ಪ್ರವೇಶ

[ಮಣ್ಣಿನ ಮನೆಯ ಕೈಸಾಲೆ. ಹಗ್ಗದ ಮಂಚದ ಮೇಲಿನ ಕಂಬಳಿಯ ಮೇಲೆ ಮಂಜಯ್ಯನು ಮಲಗಿದಾನೆ. ಪಕ್ಕದ ಮುಕ್ಕಾಲುಮಣೆಯ ಮೇಲೆ ಔಷಧಿ ಶೀಸೆಗಳು, ಗಂಜಿಯ ಪಾತ್ರೆಗಳು ಇವೆ. ಕೃಶಿಸಿ ಕಳೆಗುಂದಿದ ಮುಖದ ಮಂಜನು ಬಹು ಸಂಕಟಪಡುತ್ತಾ "ಅಯ್ಯೋ! ಅಯ್ಯೋ!" ಎನ್ನುತ್ತಾ ಹೊರಳುತ್ತಿದ್ದವನು, ಹಾಗೇ ಸುಮ್ಮನಾಗುವನು. ನಡುಗುತ್ತಿದ್ದ ಕಾಲು ಹಾಗೇ ನಿಲ್ಲುವುದು. ಇತ್ತಲಿಂದ ವಸಂತನು ಒಂದು ಶೀಸೆ ಔಷಧಿಯನ್ನೂ, ಒಂದು

ಕೋಳೀಮೊಟ್ಟೆಯನ್ನೂ ಹಿಡಿದು ಓಡಿಬರುವನು. ಮಂಜನಬಳಿ ಬಂದು ಮಣೆಯಮೇಲೆಲ್ಲವನ್ನೂ ಇಟ್ಟು ಅವನು ಸುಮ್ಮನಿರುವುದು ನೋಡಿ]

ವಸಂತ—ಮಂಜಯ್ಯಾ! ಏನು? ಸಂಕಟ ಕಡಿಮೆಯಾಯಿತೆ?

ಮಂಜ— (ಪ್ರಯಾಸದಿಂದ) ಆಯಿತು ಬುದ್ಧೀ! ಸಂಕ್ಟ ನಿಂತೋಯ್ತು.... .

ವಸಂತ—ಕರೆದಕೂಡಲೇ ಬರುತಿದ್ದ ಡಾಕ್ಟರು ಇವತ್ತೇಕೆ ಔಷಧಿ ಕೊಟ್ಟು "ನೀವು ನಡೀರಿ, ಬಂದೇ"ಂದರು? ಮಂಜಯ್ಯಾ! ಈಗ ಮೊದಲು ಈ ಮೊಟ್ಟೇ ಕೊಟ್ಟರೆ ಸಂಕಟನಿಂತುಹೋಗುತ್ತೇ. ಅರ್ಧ ಘಂಟೆಯ ಮೇಲೆ ಒಂದು ಡೋಸ್ ಔಷಧಿ ಕೊಡೀಂತ ಹೇಳಿದಾರೆ. ಮೊಟ್ಟೆ ಕೊಡಲೇ?

ಮಂಜ—ಬುದ್ಧೀ! ಇನ್ನು ಯಾಕೌಸದಿ ಮೊಟ್ಟೇ ಎಲ್ಲಾ!.... . ಆಯಿತು ....ಡಾಕಟರು ತಿಳಿಕೊಂಡರು ......ರಾಯರು........?

ವಸಂತ—ಅಪ್ಪಾ ಅವರಿಗೆ ಮಂಡಿ ಹಿಡಿದಿರೋದು ಇನ್ನೂ ಬಿಟ್ಟೇ ಇಲ್ಲ. ಇನ್ನು ಸ್ವಲ್ಪಹೊತ್ತಿಗೆ ಗಾಡಿಮಾಡಿಕೊಂಡು ಬರುತೀನೀಂದರು

(ಮಂಜಯ್ಯನು ವಸಂತನ ಮುಖವನ್ನು ಕೈಲಿ ಹಿಡಿದು ನೋಡುವನು. ಕಣ್ಣುಗಳಲ್ಲಿ ನೀರು ತುಂಬುವುದು).

ಮಂಜ—ನನ್ನ ಕಂದಾ!

ವಸಂತ (ಅವನ ತಲೆಯನ್ನು ನೇವರಿಸುತಾ) ಮಂಜಾ!

ಮಂಜ—ನನ್ನ ದೇವರೇ! ನನ್ನುಸಿರು ಮೆತ್ತಗಾಗುತಾ ಐತೆ.... ಇನ್ನು ತಡೀಲಾರೆ .ಮುಂದೆ ಅವರಿವರಿಂದ ಆಗೋದನ್ನ ನಾನೇ ಮಾಡಿ ಬಿಡುತೀನಿ .... (ಮುಖದಲ್ಲಿ ದುಗುಡ)

ವಸಂತ—(ಕಾತುರನಾಗಿ) ಮಂಜಾ! ಈಗತಾನೇ ಸಂಕಟ ನಿಂತು ಹೋಯಿತೆಂದೆ. ಮತ್ತೆ ಹೀಗೇಕೆ ಮಾತನಾಡುತಿದೀಯಾಪ್ಪಾ?

ಮಂಜ—(ಸ್ವಲ್ಪ ಸಮಾಧಾನಕ್ಕೆ ಬರಲು ಯತ್ನಿಸುತ್ತಾ) ನೀವು ನಿಮ್ಮ ತಾಯೀನ ನೋಡಿದೀರಾ, ದೇವರೇ?

ವಸಂತ—(ಆಶ್ಚರ್ಯದಿಂದ) ಮಂಜಾ! ಎಚ್ಚರ ಮಾಡಿಕೋಪ್ಪಾ! ಇದು ಯಾಕೆ ಹೀಗೆ ಮಾತನಾಡುತೀ!

ಮಂಜ—ಇಲ್ಲ ಬುದ್ಧೀ ! ಇಪ್ಪತ್ತು ವರುಷದಿಂದ ಒಟ್ಟೇಲಿಟ್ಟುಕೊಂಡಿದ್ದೆ. ಇನ್ನಾಗಕಿಲ್ಲ. ನನ್ನ ದೇವರೇ ! (ತಲೆದಿಂಬಿನ ಕೆಳಗಿನಿಂದ ಒಂದು ಫೋಟೋವನ್ನು ತೆಗೆದುಕೊಟ್ಟು) ಇದೋ ನೋಡಿ, ನಿಮ್ಮಮ್ಮ ..... ನಿಮ್ಮನ್ನ ಎತ್ತು, ಒಂದು ತಿಂಗಳು ಎದೆ ಹಾಲು ಕುಡಿಸಿ, ಕಡೆಗೆ ಬಿಡಲಾರದೆ ಬಿಟ್ಟು ನನಗಿಂತ ಮುಂಚೆ ದೇವರ ಪಾದ ಸೇರಿದರು.

ವಸಂತ—(ಕೈಗೆ ಫೋಟೋ ತೆಗೆದುಕೊಂಡು ಎಡಬಿಡದೆ ನೋಡುತ್ತಿರುವನು. ಹೃದಯದಲ್ಲಿ ಪ್ರಚಂಡವಾದ ಬಿರುಗಾಳಿ ಏಳುವುದು—ವನಾಂತರದಲ್ಲಿರುವಂತೆ) ಮಂಜಾ ೨ !

ಮಂಜ—ಔದು ಬುದ್ಧೀ ! ಇಪ್ಪತ್ತು ವರುಷಿಂದೆ ...ಉಗಾದಿ ದಿನ ಈ ನಿಮ್ಮಮ್ಮ ಕಣ್ಣು ಮುಚ್ಚಿಬಿಟ್ಟರು ...ನಿಮ್ಮನ್ನ ನನ್ನ ಕೈಗೊಪ್ಪಿಸಿ ...

ವಸಂತ—(ಅನೈಚ್ಛಿಕವಾಗಿ) ಅವ್ಮಾ !

ಮಂಜ—ಆ ರಾತ್ರಿ ....ಬನ್ನೂರು ತೋಟದ ಮನೆ ಮಾಡೀಲಿ....

ವಸಂತ (ಕಂಬನಿದುಂಬಿ) ಅಮ್ಮಾ!.....(ಇತ್ತ ತಿರುಗಿ) ಮಂಜಾ ! ಹೇಳು ! ಹೇಳು ! ನಮ್ಮಮ್ಮನ ವಿಚಾರ ಇನ್ನೂ ಹೇಳು ! (ಆ ಫೋಟೋವನ್ನು ಎದೆಗಪ್ಪುವನು ಕಣ್ಣುಗಳಲ್ಲಿ ನೀರು ಹರಿಯುವುದು.)

ಮಂಜ— ಇವರೆಷರು .... ಲಲಿತಮ್ಮ ..... (ಗಂಟಲು ಒಣಗುವುದು)........ನೀರು ! ನೀರು !

ವಸಂತ—(ಎದ್ದು ಪಕ್ಕದಲ್ಲಿದ್ದ ಲೋಟದಿಂದ ನೀರನ್ನು ಕುಡಿಸಿ ಹತ್ತಿರ ಕುಳಿತು ಅವನ ಕೈಹಿಡಿದು, ಮಂಜಾ ! ....ಮಂಜಾ !

ಮಂಜ—(ಮುಚ್ಚಿದ ಕಣ್ಣು ಅರೆತೆರೆದು) ಬುದ್ಧೀ ! ನನ್ನ ದೇವರೇ ! ಲಲಿತಮ್ಮಾ ಅವರು. ......ಸೂಳೇ ಮನೇಲಿ ಹುಟ್ಟಿ ಬೆಳದೋರು........

ವಸಂತ—(ಸಿಡಿಲು ಬಡಿದವನಂತೆ ಕ್ರಂದನ ಧ್ವನಿಯಿಂದ) ಮಂಜಾ! (ತಲೆಯು ಮಂಚದ ಮೇಲೆ ಜಾರುವುದು. ಕಣ್ಣುಗಳು ಮುಚ್ಚುವುವು. ಏದುತ್ತಿರುವನು).

ಮಂಜ—ಮದುವೆಗೆ ಮುಂಚೆ, ಇಪ್ಪತ್ತೆರಡು ವರುಷದಿಂದೆ—ನಮ್ಮ ರಾಯರು ಲಲಿತಮ್ಮನ್ನ ಅವರಮ್ಮ ಕಸುಬಿಗೆ ತಳ್ಳೊಕ್ಕೋಸ್ಕರ ಒಡೀತಿದ್ದದ್ದನ್ನು ನೋಡಲಾರದೆ ಕರಕೊಂಡು ಬಂದು . .....ಬನ್ನೂರು ತೋಟದ

ಮನೇಲಿ ಗಂಡ ಎಂಡರಂಗಿದ್ದರು........ಎತ್ತ ತಿಂಗಳಿಗೆ ಸನ್ನಿ ಬಂತು .. ಸಾಪಿರಾರು ರೂಪಾಯಿ ಕರ್ಚುಮಾಡಿದರು ! ... ..ವ್ಯರ್ತ ... ..“ ಈ ಮಗನಿಗೆ ಅವರಮ್ಮ ಸೂಳೇಂಬೋದು ಅದರ ಕಿವಿಗೇ ಬೀಳದಂತೆ ಜೀವ ಇರೋಕಂಟ ನೋಡಿಕೊಳ್ಳುತೀವೀಂತ ಆಣೆಮಡಗೀಂದರು. ..... ನಾನೂ ರಾಯರೂ·ಆಣೆಮಡಗಿದೆವು ಆಮೇಕೆ........(ಕನಸಿನಲ್ಲಿ ಕನವರಿಸುವವ ನಂತೆ) ಲಲಿತಮ್ಮ.......ಲ........ಲಿ........ತ. .. ...ಮ್ಮ..........(ಉಸಿರು ಮೆತ್ತಗಾಗುವುದು.)

ವಸಂತ—(ಹುಚ್ಚನಂತೆದ್ದು ಮಂಜನ ಮುಖಹಿಡಿದು) ಹೇಳೂ ಮಂಜಾ ! ಇನ್ನೂ ಹೇಳೂ ! ಮಂಜಾ ! ಮಂಜಾ ! ನನ್ನ ಹೆತ್ತತಾಯೀ ? ನನ್ನಮ್ಮಾ ? ಮಂಜಾ ! ಮಂಜಾ ! (ಗಟ್ಟಿಯಾಗಿ) ಮಂಜಾ ಽಾಾ ! (ಮಂಚಕ್ಕೆ ತಲೆ ಬಡಿಯುವನು ಬಿಕ್ಕುತ್ತಿರುವನು. ಕ್ಷಣಕಾಲಾ ನಂತರ ಕತ್ತೆತ್ತಿ ಮಂಜನ ಮುಖದಬಳಿ ಮುಖವಿಟ್ಟು, ಮೇಲ್ದನಿಯಲ್ಲಿ) ಮಂಜಾ ! ಮಂಜಾ ! (ಗಾಬರಿಯಿಂದ ಮೂಗಿನ ಹತ್ತಿರ, ಬಾಯಿಮೇಲೆ ಕೈಯಿಟ್ಟು ನೋಡುವನು ; ಉಸಿರು ನಿಂತಿರುವುದನ್ನು ಕಂಡು ಎದೆಯ ಮೇಲೆ ಕೈಯಿಡುವನು-ನಿಂತಿರುವುದು. ಉಕ್ಕಿಬರುತ್ತಿರುವ ಸಂಕಟವನ್ನು ನುಂಗುತ್ತಾ ಅವನ ಮುಖದ ಬಳಿ ಮುಖವಿಟ್ಟು ತುಂಬಿದ ಪ್ರೇಮದಿಂದ ‘ಮಂಜಾ !’ ಎನ್ನುವನು. ಕಣ್ಣೀರು ಕೋಡಿ ಹರಿಯುವುದು ಕ್ಷಣಕಾಲ ನಿಶ್ಶಬ್ದ) ನನ್ನ ದೇವರು ನನ್ನ ಕೈಬಿಟ್ಟು ಹೋದ ! (ಮಂಜನ ಪಾದಗಳಿಗೆ ನಮಸ್ಕರಿಸುವನು. ನಂತರ ಅವನ ಮುಖವನ್ನು ಮೆಲ್ಲಗೆ ಮುಚ್ಚಿ ಫೋಟೋ ವನ್ನು ಕೈಲಿ ಹಿಡಿದು ಮುಂದೆ ಬರುವನು) ಈಗೆಲ್ಲಾ ಅರ್ಥವಾಗುತಾ ಇದೆ : ಸಾಕಿದಮ್ಮನ ಒಲ್ಲದ ಪ್ರೀತಿ ; ಮನೆಯ ಯಜಮಾನಿಯ ಮಗನ ದ್ವೇಷ ; ಹಣವಂತರ ಮನೆಯ ಅಡಿಗೆಯವನ ತುಚ್ಛತಿರಸ್ಕಾರ,—ಅಸ್ಪಷ್ಟವಾದ ಪಿಸು ಮಾತುಗಳ ಸುರಮಳೆ ನನ್ನ ಹಾಳು ಹುಟ್ಟಿನ ನಿಂದೆ...... ನಾನು ನಾ. ನು....ಸೂಳೆಯ ಮಗ....(ಫೋಟೋ ನೋಡುವನು ಕರುಳು ಕೂಗುವುದು) ಅಮ್ಮಾ ! ಇಪ್ಪತ್ತು ವರುಷಗಳಿಂದ ನನ್ನ ಹೃದಯದಲ್ಲಿ ಮುಸುಕುಮುಸುಕಾಗಿ ಕಾಣಿಸುತ್ತಿದ್ದ ಸುಂದರ ಮುಖ, ಆ ಎಳೆ ನಗು, ಆ ಪ್ರೇಮದೃಷ್ಟಿ ಇದೇ ! ಇದೇ !........ಉಗಾದಿ ಹಬ್ಬದ ದಿನ !........ಸನ್ನಿ ಬಂದು !........

ಈ ಪಾಪಿ ದೇಹ ಭೂಮಿಗೆ ಬಂದ ತಿಂಗಳಿಗೆ (ಸಂಕಟ) ಅಮ್ಮಾ ಶಾಶಾ! (ಫೋಟೋವನ್ನಪ್ಪುವನು).... ಆ ನನ್ನ ತಂದೆ ನನ್ನನ್ನು ಈ ಇಪ್ಪತ್ತು ವರುಷಗಳೂ ಮನೇಲಿಟ್ಟು ಸಾಕಬೇಕಾಗಿದ್ದರೆ, ಈ ನನ್ನ ಹುಟ್ಟಿಗಾಗಿ ಅವರೆಲ್ಲರಿಂದಲೂ ಇನ್ನೆಷ್ಟು ಅಪಮಾನಗಳನ್ನ ಸಹಿಸಿರಬೇಕು! ಇನ್ನು ನಾನು ಆ ಮನೇಲಿದ್ದಷ್ಟೂ, ಆ ಪ್ರೇಮಮೂರ್ತಿಗೆ ನರಕಯಾತನೆ.... .. ನನಗೆ ಹಕ್ಕಿಲ್ಲ ...ನಾನು ......ಸೂ ...ಳೆ....ಯ (ಫೋಟೋ ನೋಡಿ ಅಪ್ಪಿ) ಅಮ್ಮಾ! (ಕಣ್ಮುಚ್ಚಿ ನಿಲ್ಲುವನು. ಕಣ್ಣುಗಳಲ್ಲಿ ನೀರು ಹರಿಯು ತ್ತಿರುವುದು).

ಎಂಟನೆಯ ಪ್ರವೇಶ

[ಊರಾಚೆ ತೋಪಿನ ಬಳಿ ವಸಂತನು ಒಂಟಿಯಾಗಿ ನಿಂತಿರುವನು. ಮುಖದಲ್ಲಿ ಕುದಿದು ಆರಿದ ದುಃಖ ಸಂತಾಪ]

ವಸಂತ—ಅಮ್ಮಾ! ನೀನು ಹೋಗೋ ಬದಲು ನಾನು ಹೋಗಿದ್ದರೆ ಎಷ್ಟೋ ಚೆನ್ನಾಗಿರುತ್ತಿತ್ತು! ಅಥವಾ ನಾನು ಹುಟ್ಟುತ್ತಲೇ ಚಂಡಾಲರ ವಶಮಾಡಿದ್ದರೆ ....ಅಯ್ಯೋ! ಅಮ್ಮಾ! ನೀನು ಸತ್ತು ಬದುಕಿದೆ! ನಾನು ಬದುಕಿಸತ್ತೆ! .ನನ್ನ ಹೆತ್ತಮ್ಮನ ಸೇವೆಗೋಸ್ಕರವಲ್ಲವೇ ನಾನು ಈ ದೇಹಾನ ಮುಡಿಪಾಗಿಟ್ಟಿರೋದು. ಅಂಥ ನೀನು ಕಣ್ಮರೆಯಾಗಿರೋವಾಗ ಈ ದೇಹಕ್ಕೆ ಪವಿತ್ರತೆ ಎಲ್ಲೀದು? (ಹಿಂದೆ 'ಸೂಳೆಯ ಮಗನಿಗೆ ಪವಿತ್ರತೆ ಯಂತೆ' ಎಂಬ ರಾಜಕುಮಾರನ ಧಿಕ್ಕಾರದ ನುಡಿಗಳು ಕೇಳಿಬರುವುವು. ವಸಂತನು ಬೆಚ್ಚುವನು. ಕ್ಷಣಕಾಲದಲ್ಲಿ ರಾಜ ಮತ್ತು ಕಾಶಿ ಪ್ರವೇಶಿಸು ವರು. ವಸಂತನು ತಲೆ ತಗ್ಗಿಸಿ ನಿಂತಿರುವನು.)

ರಾಜ—(ಮುಂದೆ ಬಂದು) ಏನಯ್ಯಾ! ವೇದಾಂತ ಕೇಸರಿ! ಕೇಳಿ ದೆಯಾ ನಿನ್ನ ಹುಟ್ಟಿನ ರಹಸ್ಯಾನಾ?

[ವಸಂತನು ದೂರ ಸರಿಯುವನು]

ರಾಜ—ಯಾಕೆ ಮೌನ?........ಇದುವರೆಗೂ ಮೆತ್ತಗೆ ಪತ್ತೇ ಕೊಡದೆ ನೀನೂ, ಆ Loafer of a father ಅನ್ನಿಸಿಕೊಂಡೋನೂ ಪಿತ್ರಾರ್ಜಿತ ಸ್ವತ್ತನ್ನ ಕರಗಿಸಿ, ಹೊಲೇರ ಮಾದಿಗರ ಭಿಕಾರಿಗಳ ಪಾಲು

ಮಾಡಿದಿರಿ! ಸದ್ಯ ಇನ್ನೂ ಸ್ವಲ್ಪ ಉಳಿದಿರೋವಾಗಲೇ ದೈವವಶಾತ್ ನಿನ್ನ ರಹಸ್ಯ, ಅಹಹ್ಹಾ! ಈಚೆಗೆ ಬಂದುಬಿಡುತು Scamp!

ವಸಂತ—(ಕೆಣಕಲ್ಪಟ್ಟ ಸಿಂಹದ ಮರಿಯಂತೆ ತಿರುಗಿ) ರಾಜಾ! ಹದ್ದುಮಿಾರಿ ಹರಟಬೇಡ! ಅಪ್ಪನ ಹೆಸರಿನ ಗೌರವಕ್ಕಾದರೂ

ರಾಜ—(ರೇಗಿ) ಯಾರೋ? ಯಾಗಪ್ಪನೋ? ಆ Debauchee ಮುದುಕ, ಹೊಟ್ಟೆಯಲ್ಲಿ ಹುಟ್ಟದ ಮಗನನ್ನ ವರ್ಷಾನುಗಟ್ಟಲೆ ವಂಚಿಸುತಾ ಬಂದ ಆ Thug, ಅವನನ್ನ ಅಪ್ಪಾಂತ ಹೇಳಿಕೊಳ್ಳೋದಕ್ಕೆ ನಾಚಿಕೆಯಾಗುತ್ತೆ ... ಅವನು ನಿನ್ನಪ್ಪಕಣೋ?

ವಸಂತ—ರಾಜಾ! ನಿನಗೆ ಜೀವದ ಮೇಲೆ ಆಸೆಯಿದ್ದರೆ ಇಲ್ಲಿಂದ ಒಂದು ಮಾತೂ ಆಡದೆ ಸುಮ್ಮನೆ ಹೊರಟುಹೋಗು.

ರಾಜ—ಏನೋ! ಇನ್ನೂ ನೀನು ನಮಣ್ಣಾಂತ ತಿಳಿಕೊಂಡು ಬೊಗಳುತಾ ಇದೀಯಾಂತ ಕಾಣುತ್ತೆ ಅಲ್ಲವೋ! ನಿನ್ನ ಜನ್ಮಕ್ಕೆ ಮಾತನಾಡೋದಕ್ಕೆ ನಾಚಿಕೆಯಾಗೊಲ್ಲವೆ? ನನ್ನ ಮನೇಲಿ ನನ್ನ ತಾತ ಮುತ್ತಾತಂದಿರ ಕಾಸನ್ನ ಕದ್ದು ಈ ದೇಹಾನ ಬೆಳೆಸಿಕೊಂಡಿದ್ದಲ್ಲದೇ, ಕಂಡ ಹಾಗೆ ಕಾಣದಹಾಗೆ ಆ ಮುದುಕನನ್ನ ಮರಳುಮಾಡಿ ದುಡ್ಡನ್ನು ಹೊಲೇರು ಮಾದಿಗರ ಪಾಲುಮಾಡುತಿರೋ ನೀನು ನನ್ನನ್ನ ಹೊರಡೂಂತಿಯಾ?! Ungrateful cur!

ವಸಂತ—(ಮುಂದೆ ನುಗ್ಗಿ ಹೊಡೆಯುಲು ಹೋಗುವನು. ಆದರೆ ಹಿಮ್ಮೆಟ್ಟುವನು) ಇಲ್ಲ! ನೀನು ನಾಯಿ! ಬೊಗಳಿಕೋ!

ರಾಜ—(ಹಿಂದೆ ಹೋಗಿ) ಏ! ಮೈಮೇಲೆ ಪ್ರಜ್ಞೆ ಇಟ್ಟು ಮಾತನಾಡು. ನೀನು ಜಮಿಾನ್‌ದಾರ್ ಲಕ್ಷ್ಮೀಪತಿರಾಯರ ಮಗಾನ್ನೋ ಪೂರ್ವಜನ್ಮದ ಕನಸಿನ ಕನವರಿಕೇಲಿ ಒದರಬೇಡ! ಜಮೀನ್ದಾರ ನಾನು. ನನ್ನ ಮನೆಗೆ ಕದ್ದು ಬಂದು—ತಿಂದು ತೇಗಿ, ಮೈಬೆಳೆಸಿದೋನು ನೀನೂ, ಅಲ್ಲದೆ ಆ ನಿನ್ನನ್ನ ಹೆತ್ತೋಳು .... ಆ ಸೂಳೇ! .....

ವಸಂತ—(ಕಿಡಿಯಾಗಿ ಮುಂದೆ ನುಗ್ಗಿಬಂದು ಬಲವಾಗಿ ಕೆನ್ನೆಗೆ ಕೊಡುವನು. ರಾಜಕುಮಾರನು ತತ್ತರಿಸಿ, ಕರಡಿಯಂತೆ ಮುಂದೆ ನುಗ್ಗಿ ಒದೆದು ಕೆಡಹುವನು. ಕಾಶಿ ಮುಂದೆ ಬಂದು ಮಧ್ಯೆ ನಿಲ್ಲುವನು.)

ರಾಜ—ಲೋ! ಸೂಳೇಮಗನೇ! ಇನ್ನು ಈ ಪ್ರಪಂಚದಲ್ಲಿ ನೀನು ಯಾರಿಗೂ ನಿನ್ನ ಈ ಸುಟ್ಟಮೋರೇನ ತೋರಿಸಲಾರೆ. ತಗೋ, ನೋಡು ಈ ಪೇಪರನ್ನ. (ರಾಯನ ಮತ್ತು ವಸಂತನ ಫೋಟೋಗಳು ದೊಡ್ಡದಾಗಿ ಮುದ್ರಿತವಾಗಿದ್ದ ವರ್ತಮಾನ ಪತ್ರಿಕೆಯನ್ನು ವಸಂತನ ಮುಂದೆ ಎಸೆಯು ವನು.) ಪ್ರಪಂಚದಲ್ಲೆಲ್ಲಾ ಡಂಗೂರೆಯಾಗಿದೆ ನಿನ್ನ ಹುಟ್ಟಿನ ರಹಸ್ಯ. ಇನ್ನು ಮನೆಯ ವಿಚಾರ: ನಮ್ಮಮ್ಮನಿಗೆ ನಿನ್ನ ಅನಿಷ್ಟಮೋರೇನ ಕಂಡರೆ ಹುಟ್ಟುದ್ವೇಷ. ಇನ್ನು ಅಪ್ಪ—ಅವನೇ ಸೈಮಾಡಿ ಕೊಟ್ಟಿರೋ ಈ ಕಾಗದ ತಗೋ, (ಜೇಬಿನಿಂದ ಒಂದು ಕಾಗದವನ್ನು ತೆಗೆದು ಅವನ ಮುಂದೆಸೆದು) ನೋಡಿಕೋ. ನಿನ್ನ ಮುಖಾ ನೋಡೋಕೆ ಅವನಿಗೂ ಇಷ್ಟವಿಲ್ಲ; ಇಷ್ಟಾದ ಮೇಲೂ ನೀನಿನ್ನೂ ಮನೇಕಡೇ ಬರೋ ಪ್ರಯತ್ನಮಾಡಿದರೆ ನಿನ್ನನ್ನೂ ನಿಮ್ಮಮ್ಮನ ಹತ್ತಿರಕ್ಕೆ ರವಾನೆ ಮಾಡಬೇಕಾಗುತ್ತೆ; ಎಚ್ಚರ ವಿರಲಿ. ಏ ಕಾಶೀ! ಬಾ!!

(ಕೆನ್ನೆ ಮುಟ್ಟಿಕೊಂಡು ಹಲ್ಲು ಕಡಿಯುತ್ತಾ ರಾಜಕುಮಾರನು ಇತ್ತ ನಿಷ್ಕ್ರಮಿಸುವನು. ಹಿಂದೆ ಕಾಶಿಯು ವಸಂತನನ್ನೇ ನೋಡುತ್ತಾ ಹೊರಟು ಹೋಗುವನು]

[ವಸಂತನು ನಿಧಾನವಾಗಿ ಎದ್ದು ಕೂತು ಪೇಪರನ್ನ ಹಿಡಿದು, ಎದೆ ಯನ್ನು ಮುಟ್ಟಿ ನೋಡಿಕೊಳ್ಳುತ್ತಾ ನೋವಿನ ಸಂಕಟದಲ್ಲೇ ಓದುವನು. ಓದುತ್ತ ಓದುತ್ತ ಸಂಕಟ ಹೆಚ್ಚುವುದು]

ಮಹಾಜನರೇ! ಎಚ್ಚರ!

ಒಂದನೇ ಚಿತ್ರದಲ್ಲಿರುವ ವಸಂತಕುಮಾರನೆಂಬುವನು ಹಲವು ತಿಂಗಳಿಂದ ಪಟ್ಟಣದ ಅನೇಕ ಸಂಘಗಳಲ್ಲಿ ಕಾರ್ಯದರ್ಶಿ ಖಜಾಂಚಿ ಮೊದಲಾಗಿ ಕೆಲಸಮಾಡುತ್ತಿರುವನು, ಇವನು ಎರಡನೇ ಚಿತ್ರದಲ್ಲಿರುವ ನಮ್ಮ ತಂದೆ ಜಮೀನ್ದಾರರು ಲಕ್ಷ್ಮೀಪತಿರಾಯರ ಮಗನೆಂದು ಜನರು ನಂಬುವಂತೆ ಇವನ ಹುಟ್ಟನ್ನು ಇಪ್ಪತ್ತು ವರುಷದಿಂದ ಕಾರಣಾಂತರ ಗಳಿಂದ ರಹಸ್ಯವಾಗಿಟ್ಟಿದ್ದರು. ಇವನ ನಡತೆಗಳಿಂದ ನಮ್ಮ ವಂಶದ ಗೌರವಕ್ಕೇ ಕುಂದು ಬಂದ ಕಾರಣ ಈ ರಹಸ್ಯವನ್ನು ಬಯಲುಮಾಡಿ ದ್ದೇವೆ. ಇವನು ಸ್ವರ್ಗಸ್ಥಳಾದ ಲಲಿತಮ್ಮ ಎಂಬ ಸೂಳೆಯ ಮಗ....

(ದುಃಖವು ಅತಿಯಾಗುವುದು) ನಮ್ಮ ತಂದೆ ಮಗು ತಬ್ಬಲಿಯೆಂದು ಸಾಕಿದ ರಷ್ಟೆ. ಯಾವ ಬಗೆಯ ಹಣಕಾಸಿನ ವ್ಯವಹಾರಕ್ಕೂ, ನಮ್ಮ ಮನೆತನಕ್ಕೂ ತಿಲಮಾತ್ರವೂ ಇವನ ಸಂಬಂಧವಿಲ್ಲವೆಂದು ಈ ಮೂಲಕ ಎಲ್ಲರಿಗೂ ಎಚ್ಚರ ಕೊಟ್ಟಿದೇನೆ.

M. L. Rajkumar.
The only legal son of
Jamindar Lakshmipathy Rao.

(ಪೇಪರಿನಿಂದ ಮುಖವನ್ನು ಮುಚ್ಚಿಕೊಂಡು "ಅಪ್ಪಾ! ಅಪ್ಪಾ!" ಎಂದು ಬಿಕ್ಕುವನು. ಕ್ಷಣಕಾಲಾನಂತರ ಕಣ್ಣೀರಿನಿಂದ ತೊಯ್ದ ಆ ಚೀಟಿಯನ್ನು ಓದುವನು)—ಮುದ್ದು ಮಗು ವಸಂತಾ!

ನಿನ್ನನ್ನು ಇನ್ನು ಕಾಪಾಡುವ ಧೈರ್ಯ ನನಗಿಲ್ಲ. ಇಪ್ಪತ್ತು ವರುಷ ಗಳು ನಿನ್ನನ್ನು ಇಟ್ಟು ಸಾಕಿದ್ದೇ ಬಹು ಪ್ರಯಾಸವಾಯಿತು. ನಿನ್ನ ಹುಟ್ಟಿನ ರಹಸ್ಯವು ಬಯಲಾಯಿತಾದ್ದರಿಂದ ನೀನು ಮನೆಗೆ ಬಂದರೆ ನಾನಿ ರಲು ಸಾಧ್ಯವಿಲ್ಲ. ದೇವರು ನಿನಗೆ ಒಳ್ಳೆಯ ದಾರಿ ತೋರಿಸಲಿ. ನನ್ನ ಕೈ ಕಾಲಿನ್ನೂ ಹಿಡಿದೇ ಇರುವುದರಿಂದ ಕಾಗದವನ್ನು ಕಾಶೀ ಕೈಲಿ ಬರೆ ಯಿಸಿ ರುಜು ಮಾತ್ರ ಮಾಡಿದೇನೆ,

ಇತಿ, ಲಕ್ಷ್ಮೀಪತಿರಾಯ.

(ಓದುತ್ತಲೇ ತಲೆಯ ಮೇಲೆ ಕೈಯಿಟ್ಟು ನೆಲಕ್ಕುರುಳುವನು. ಕ್ಷಣ ಕಾಲಾನಂತರ ನಿಧಾನವಾಗಿ ಎಚ್ಚೆತ್ತು ಸುತ್ತಲೂ ನೋಡಿ ಮನಸ್ಥೈರ್ಯ ಮಾಡಿಕೊಳ್ಳುತ್ತಾ ಜೇಬಿನಿಂದ 'ಅಮ್ಮನ' ಫೋಟೋವನ್ನು ತೆಗೆದು ನೋಡುವನು.) ಅಮ್ಮಾ! ಕಂಡೆಯಾ ನಿನ್ನ ಮಗನ ಬಾಳಿನ ವೈಭವಾನ! (ಪೇಪರಿನಲ್ಲಿ ಮತ್ತೇನೋ ಕಣ್ಣಿಗೆ ಬೀಳುವುದು. ಕಾತುರನಾಗಿ ಓದುವನು)

Lovely Bazaar. ವಿದೇಶೀ ವಸ್ತ್ರಗಳ ಅಂಗಡಿಯ ಮುಂದೆ ಭಯಂಕರ ಲಾಠೀ ಛಾರ್ಜು-ಸ್ವಯಂ ಸೇವಕರ ದಳಪತಿ ವಿಶ್ವನಾಥ್‌ರವರು ಬಹು ಗಾಯಗೊಂಡು ಈ ದಿನ ಬೆಳಿಗ್ಗೆ ಆಸ್ಪತ್ರೆಯಲ್ಲಿ ಮೃತರಾದರು. (ಮುಂದೆ ಓದುವನು—ಆತುರ ಹೆಚ್ಚುವುದು) ಆದರೂ ಶ್ರೀಮತಿ ದುರ್ಗಾ ವತಿಯವರು ಪೋಲೀಸ್ ಕಮಿಷನರು ಅವರಿಗೆ ಮೊದಲೇ ಎಚ್ಚರಿಕೆ

ಕೊಟ್ಟಿದ್ದರೂ ಕೂಡ, ಇನ್ನೊಂದು ಸ್ವಯಂ ಸೇವಕರ ದಳದೊಂದಿಗೆ ನಾಳೆ ಅದೇ ಅಂಗಡಿಯ ಮುಂದೆ ಪಿಕೆಟಿಂಗ್ ನಡೆಸುವರೆಂದು ತಿಳಿದು ಬಂದಿದೆ. (ನಿಧಾನವಾಗಿ ಯೋಚಿಸುವನು. ಕಣ್ಣುಗಳನ್ನೊರಿಸಿಕೊಂಡೆದ್ದು ತಾಯಿಯ ಫೋಟೋವನ್ನು ನೋಡುವನು. ಮುಖದಲ್ಲಿ ಆನಂದೋತ್ಸಾಹ ದಲೆಗಳು ತೇಲುವುವು. ಕಣ್ಣುಗಳು ಮಿಂಚುವುವು) ನನಗಿನ್ನು ಸಾಕಿದಮ್ಮನ ಆಜ್ಞೆ ಇಲ್ಲ! ಅಪ್ಪ ಆಜ್ಞೆ ಕೊಟ್ಟಿದ್ದಾರೆ! ಇನ್ನು ಹೆತ್ತಮ್ಮನಾಜ್ಞೆ! ಅಮ್ಮಾ! ಕ್ಷಮಿಸು; ದುಡುಕಿ ಮಾತನಾಡಿದೆ. ಜನನೀ ಜನ್ಮಭೂಮಿಶ್ಚ, ಸ್ವರ್ಗಾದಪಿ ಗರೀಯಸೀ—ತಾಯೇ! ನಿನ್ನ ಮಗನ ಬಾಳಿನ ವೈಭವಾನ ನಾಳೆ ಕಣ್ತುಂಬ ನೋಡು!

(ಎದೆಗಪ್ಪುವನು-ನಿಧಾನವಾಗಿ ಕಣ್ಮುಚ್ಚಿ ನಿಷ್ಕ್ರಮಿಸುವನು.)

[ಇತ್ತಲಿಂದ ರಾಜಕುಮಾರನು ಮುಂದೆ ಬಂದು ನಿಂತು ಆನಂದ ಅಟ್ಟಹಾಸದಿಂದ ವಸಂತನು ಹೋದ ಮಾರ್ಗವನ್ನು ನೋಡುತ್ತಿರುವನು—ಹಿಂದೆ ಕಾಶಿಯು ಬಂದು ನಿಂತಿರುವನು]

ರಾಜ—(ವಸಂತನು ಕಣ್ಮರೆಯಾದ ನಂತರ) ನಾಳೆ Lovely Bazaar ನ ಮುಂದೆ ಇವನ ಹೆಣ ಬೀಳುವುದು—ಈಗಲೇ ಪೋಲೀಸ್ Superintendentನ್ನ ನೋಡಿ, ಈ ಚಂಡಾಲನ ಪರಿಚಯ ಅವರಿಗೆ ಚೆನ್ನಾಗಿ ಮಾಡಿಸಿಕೊಡಬೇಕು.

ಕಾಶಿ—ಸ್ವಾಮೀ!

ರಾಜ—(ರೇಗಿ) ಕತ್ತೇ! ನಾನೇನು ನಿನ್ನ ಬೀಗನೇ ಸ್ವಾಮಿಯಾಗೋದಕ್ಕೆ. ಇನ್ನು ನಿನ್ನ Civilise ಮಾಡೋದರಲ್ಲಿದೆ ನನಗೆ........ಹಾಂ! ಏನು ಹೇಳು!

ಕಾಶಿ—ಅವರು ತಮ್ಮ ರುಜೂನ ಗುರ್ತಿಸಲಾರದೆ ಹೋದರಲ್ಲ—ನಾಬರೆದ ಚೀಟೀಲಿ.

ರಾಜ—ನನ್ನ ರುಜುವೇನೋ?

ಕಾಶಿ—ಅಲ್ಲ ಸಾ.... ರಾಯರ ರುಜು ತಾವು ಮಾಡಿದ್ದರಲ್ಲ........

ರಾಜ—ಯಾರೋ ರಾಯರು?

ಕಾಶಿ—ತಾವೇ!

ರಾಜ—ಸರಿ. ತಗೋ ಆ ಪೇಪರನ-ಮನೇಗಿನ್ನೂ ಪೇಪರು ಬರದೇ ಇದ್ದರೆ ಇವನ್ನ ಟೇಬಲ್ ಮೇಲೆ ಹಾಕು. (ಕೆಳಗ ಬಿದ್ದಿದ್ದ ಚೀಟಿನ ಹರಿದು ಹಾಕುತ್ತಾ) ನಾನು ಹಿಂದೂಪುರಕ್ಕೆ ಹೊರಡುತೀನಿ. ಸಾಧ್ಯವಾದರೆ ನಾಳೆಯೇ ಅಮ್ಮನ ಕರಕೊಂಡು ಬಂದುಬಿಡುತ್ತೆನೆ ....ಮನೆಕಡೆ ಔಷದಿ ಪತ್ಯ ಹುಷಾರಾಗಿ ನೋಡಿಕೋ. ಆ ಜೋಯಿಸ ಬಂದರೆ ಮಟ್ಟಿಗೆ ಏನು ಮಾತನಾಡುತಾನೋ ಪ್ರತಿ ಒಂದಕ್ಷರಾನೂ ನನಗೆ ರಿಪೋರ್ಟ್ ಮಾಡ ಬೇಕು. ಕಾಶೀ ! ಎಚ್ಚರ !

ಕಾಶಿ—ಆಗಲೀ ರಾಯರೇ !

[ರಾಜಕುಮಾರ ಇತ್ತ, ಕಾಶಿ ಅತ್ತ ನಿಷ್ಕ್ರಮಣ]

ಒಂಭತ್ತನೆಯ ಪ್ರವೇಶ

(ರಾಯರ ಮಹಾಲಿನ ನಡುಮನೆ. ಮೇಜು, ಒಂದೆರಡು ಕುರ್ಚಿ ಮಾತ್ರವಿರುವುದು. ಮಂಚ ಮುಂದೆ ಬಂದಿರುವುದು. ಅದರಮೇಲೆ ರಾಯನು ಮಂಡಿಗಳನ್ನು ಹಿಡಿದು ಕುಳಿತಿರುವನು. ಮುಖದಲ್ಲಿ ಉದ್ವೇಗ, ದುಗುಡ, ಆತಂಕ. ಎದುರಿಗೆ ಕಾಶಿ ನಿಂತಿರುವನು).

ರಾಯ—ಕಾಶೀ ! ಮಂಜ ಸಾಯೋವಾಗ ವಸಂತ ಅವನ ಹತ್ತಿರವೇ ಇದ್ದನೇ ?

ಕಾಶಿ—ಇದ್ದರಂತೇಂತ ಹಳ್ಳಿಯಿಂದ ಬಂದ ಮಂಜನ ಅಣ್ಣನ ಮಗ ಲಿಂಗ ಹೇಳಿದ ಸ್ವಾಮೀ !

ರಾಯ—ಅಲ್ಲಿಂದ ಮುಂದೆಲ್ಲಿಗೆ ಹೋದ ?

ಕಾಶಿ—ಯಾರಿಗೂ ತಿಳೀದು ಸ್ವಾಮೀ !

ರಾಯ—(ಪೇಪರನ್ನು ಕೈಗೆ ತೆಗೆದುಕೊಂಡು ಉಕ್ಕುವ ಸಂತಾಪ ಸಂಕಟ ಕೋಪಗಳಿಂದ) ಈ ಕುಲಪಾತಕಿ ರಾಜನೇನಾದರೂ ಅವನ ಮುಖ ಮುರಿದನೇ ! ಕಾಶೀ ! ನೀನಿದ್ದೂ ಕೂಡ (ಪೇಪರನ್ನು ಹಿಡಿಯುತ್ತಾ) ಇಂಥಾ ಜೀವಶ್ರಾದ್ಧದ ಕೆಲಸ ಮಾಡೋದಕ್ಕೆ ಅವಕಾಶವಾಯಿತೇ !

ಕಾಶಿ—ಮಂಜ ಸಾಯೋವಾಗ ಎಲ್ಲಾ ಹೇಳಿಬಿಟ್ಟನಂತೆ ಸ್ವಾಮಿ, ವಸಂತರಾಯರಿಗೆ; ಅವನ್ನ ನೋಡಬೇಕೂಂತ ಹೋದ ರಾಜಕುಮಾರರು ತಟ್ಟನೆ ಹೊರಗೆ ನಿಂತು ಎಲ್ಲಾ ಕೇಳಿಸಿಕೊಂಡು ಮನೆಗೆ ಬಂದು ಹೊರಗಡೆ

ಯಿಂದಲೇ ನನ್ನ ಕೂಗಿದರು, ಹೋದೆ. " ಹಿತ್ತಲಬಾಗಿಲು ತೆಗೆ. ನಾನು ಸೂತಕದೋರನ್ನ ಮುಟ್ಟಿದೀನೀಂದರು. ಬಾಗಿಲು ತೆಗೆದೆ. ಒಳಕ್ಕೆ ಬಂದು, ತಮ್ಮ ರೂಮಿನಲ್ಲಿ ಕಾಲು ಘಂಟೆ ಇದ್ದು ಪುನಃ ಹೊರಕ್ಕೆ ಹೊರಟು ಹೋದರು. ನೆನ್ನೆ ಸಿಕ್ಕಿ ' ಹಿಂದೂಪುರಕ್ಕೆ ಹೋಗುತೀನೀಂತ ರಾಯರಿಗೆ ಹೇಳೂ' ಅಂದರು

ರಾಯ—(ಕಂಬನಿದುಂಬಿ) ವಸಂತಾ ! ತಬ್ಬಲಿ ಮಗುವೇ! ನನ್ನ ಈ ಸ್ಥಿತೀಲಿ ಬಿಟ್ಟು ಎಲ್ಲಿಗೆ ಹೊರಟು ಹೋದೆ! ಹೆಜ್ಜೆ ಹೆಜ್ಜೆಗೂ ನನ್ನಪ್ಪಣೆ ಕೇಳುತಿದ್ದೋನು, ಈಗ ನನಗೆ ಹೇಳದೆ ಹೊರಟು ಹೋಗೋದೇ ! .. .... ಕಾಶೀ ! ಹೋಗಿ ಬೆಟ್ಟನ್ನಾದರೂ ಕರಿ-ವಿಚಾರಿಸೋಣ.

ಕಾಶಿ—ನೆನ್ನೆ ಅವನು ಸಿಕ್ಕಿದ್ದ ಸ್ವಾಮಿ! ಕೇಳಿದೆ. ಅವನು— " ಅವರನ್ನೋಡಿ ಮೂರು ದಿನವಾಯಿತು.—ನಾನು ಊರೆಲ್ಲಾ ಹುಡುಕುತಾ ಇದೀನೀ"ಂದ.

(ರಾಯನು ಶೂನ್ಯದೃಷ್ಟಿಯಿಂದ ನೋಡುತ್ತಿದ್ದು ಏಳಲು ಪ್ರಯತ್ನಿಸಿ, ಆಗದೆ ಮಂಚದ ಮೇಲುರುಳುವನು. ಕಾಶಿ ಓಡಿಬಂದು ಎಬ್ಬಿಸಿ ಕೂಡಿಸುವನು.

ರಾಯ—ವಸಂತಾ ! ಕಂದಾ ! (ಕತ್ತನ್ನು ತಗ್ಗಿಸುವನು. ಹೊರಗಡೆ ಯಾರೋ ಕೂಗುವ ಧ್ವನಿಯಾಗುವುದು—ಕತ್ತೆತ್ತಿ) ಕಾಶೀ ! ಯಾರೋ ಕೂಗುತಾ ಇರೋಹಾಗಿದೆ ನೋಡು. (ಕಾಶಿಯು ಹೋಗುವನು. ರಾಯನೂ ಕಾತುರನಾಗ ಮಂಡಿಯನ್ನು ಹಿಡಿದು ಮೆಲ್ಲಗೆ ಹೆಜ್ಜೆಯಿಡುತ್ತಾ ಮುಂದೆ ಬಂದು ಮೇಜನ್ನು ಹಿಡಿದುನಿಂತು ನಿರೀಕ್ಷಿಸುತ್ತಿರುವನು).

ಕಾಶಿ—(ಪ್ರವೇಶಿಸಿ) ಸ್ವಾಮಿ ಬೆಟ್ಟಯ್ಯ ಬಂದಿದಾನೆ. ಬಾಯಲ್ಲಿ ಮಾತು ಹೊರಡದೆ ಬಿಕ್ಕುತಿದಾನೆ.

ರಾಯ—(ಮುಂದೆ ಹೆಜ್ಜೆಯನ್ನಿಡಲು ಪ್ರಯತ್ನಿಸುತ್ತಾ) ಬೆಟ್ಟ ! ಬೆಟ್ಟ !.... ಒಳಗೆ ಬಾರೋ........

ಕಾಶಿ—ಸ್ವಾಮಿ ! ಅವನು ಹೊಲೆಯ. ಒಳಗೆ ಹೇಗೆ ಬಂದಾನು ?

ರಾಯ—ನಿಜ ! ಇದು ಹೊಲೆಯರ ಮನೆ. ಬೆಟ್ಟನಂತತಹ

ನಿಷ್ಕಪಟಿಗಳು ಬರಲು ಯೋಗ್ಯವಿಲ್ಲ! ಕಾಶೀ! ಹೋಗು ನೀನೇ ಹೋಗಿ ಬೆಟ್ಟನನ್ನು ಜಾಗ್ರತೆ ಒಳಗೆ ಕರೆದುಕೊಂಡು ಬಾ.

(ಕಾಶಿಯ ನಿಷ್ಕ್ರಮಣ)

ಕಾಶಿ—(ಪ್ರವೇಶಿಸಿ) ಬಾಗಿಲಬಳಿಗೆ ಬಂದಿದಾನೆ.

ಬೆಟ್ಟ—(ಬಾಗಿಲಲ್ಲೇ ನಮಸ್ಕರಿಸಿ) ಬುದ್ಧೀ ಬಂದಿನ್ನಿ ದ್ಯಾವರಾ.

ರಾಯ—ನಾನು ನಡೀಲಾರೆ! ಬಾ ಒಳಗೆ ಬಾ! ಏನು ಸಮಾಚಾರ ಹೇಳು.

ಬೆಟ್ಟ—(ಒಂದು ಹೆಜ್ಜೆ ಮುಂದೆ ಬಂದು ಅನುಮಾನಿಸಿ) ನನ್ನ ನೆರಳು ಬೀಳಬಾರದೂ ನನ್ನೊಡೆಯಾ!

ರಾಯ—ನಿನ್ನ ನೆರಳು ಬಿದ್ದು ಪವಿತ್ರವಾಯಿತು. ಬಾ, ಮುಂದೆ ಬಾ. ವಸಂತನ ವಿಚಾರವೇನು ಹೇಳು? ಏನಾದರೂ ಗೊತ್ತಾಯಿತೆ?

ಬೆಟ್ಟ—(ಕಣ್ಣೊರಸಿಕೊಳ್ಳುತ್ತಾ) ಬುದ್ದೀ ಅದನ್ನೇಳಾಕೆ ಓಡಿಬಂದೆ, ಬುದ್ದಿ. ಕೋರ್ಟಿನ ಮುಂದೆ ನೂರಾರು ಜನ ಮುತ್ತಿದ್ದರು. ಪೋಲೀಸನೋರ ಬಸ್ಸಾಗೆ ಚಿಕ್ಕರಾಯ್ರು ಮಲಗ್ಸಿದ್ದರು ತಲೆಗೆ ಬಟ್ಟೆ ಕಟ್ಟಿದ್ದರು. ಅಂಗಿ ಎಲ್ಲಾ ರಕ್ತ ಆಗಿತ್ತು. ಪಕ್ಕದಾಗೆ ಒಬ್ಬ ಡಾಕ್ಟ್ರು ಅದೇನೋ ಕುಡೀಸ್ತಾ ಇದ್ರು. ಪೋಲೀಸಿನೋರ ನೂಕು ನುಗ್ಗಲಿನಾಗೆ ಏಟು ಬೀಳುತಿದ್ದರೂನೂವೇ ಮುಂದಕ್ಕೆ ನುಗ್ಗಿದೆ. ಬುದ್ದೀಂತ ಕೂಗಿದೆ. ರಾಯರ್ರು ಎದ್ದು ಕುಂತು ಮೆಲ್ಲಗೆ ಬೆಟ್ಟಯ್ಯಾಂದರು. ಡಾಕ್ಟ್ರು ಮಾತಾಡಬ್ಯಾಡಾಂತ ತಡೆದರು. ಹಿಂದಿನಿಂದ ಇಬ್ಬರು ಪೋಲೀಸಿನೋರು ಬಂದು ನನ್ನ ದರದರನೆ ಎಳೆದರು. ಆದರೂವೆ ರಾಯರ ಬಸ್ಸು ಒಂಡೋದರೊಳಗೆ "ನಾನು ಜೈಲಿಗೆ ಹೋಗುತಿದೀನಿ, ಮೂರು ವರಸ ಕಟಿನ ಸಜ. ನಮ್ಮ ತಂದೆಗೆ ತಿಳಿಸಿಬಿಡು" ಅಂತ•ಕೂಗಿ ಏಳಿದರು. ಡಾಕ್ಟ್ರು ಅವರ ಬಾಯಿ ಮೇಗೆ ಕೈಮಡಗಿ ಮುಗಿಸಿ-ಬಿಟ್ಟರು. ನಾನು ಕೊಡವಿಕೊಂಡು ನುಗ್ಗಿದೆ. ಆದರೆ ಹಿಂದಿನಿಂದ ಪೋಲೀಸಿನವನೊಬ್ಬ ಲಟ್ಟಾ ತಗೊಂಡು ತಲೇಮೇಗೊಡೆದ. ಎಚ್ಚರಆಗುತ್ಲು ನೋಡಿದೆ. ಸುತ್ತಲೂ ಒಬ್ಬನೂ ಇಲ್ಲ. ಅಲ್ಲಿಂದ ತಮ್ಮತಾವ ಓಡಿಬಂದೆ ಬುದ್ದಿ.

ರಾಯ—(ತತ್ತರಿಸುತ್ತಾ) ತಲೆ.... ಗಾಯ.... ಇಸಾಪುರ.... ಜೈಲೂ!

ಮೂರು ವರುಷ!........ಕಠಿಣ ಶಿಕ್ಷೆ!........! ವಸಂತಾ!! (ಕೂಗಿ ಕುಕ್ಕರಿಸುವನು. ಕಾಶಿ ಮುಂದೆ ಬಂದು ರಾಯರನ್ನು ಎಬ್ಬಿಸಲು ಹೋಗುವನು.)

ರಾಯ—(ರೇಗಿ) ಮುಟ್ಟಬೇಡ ನನ್ನನ್ನ, ದೂರ ನಿಲ್ಲು. (ಬೆಟ್ಟನ ಕಡೆ ತಿರುಗಿ, ನೀರು ತುಂಬಿದ ಕಣ್ಣುಗಳಿಂದ), ಬೆಟ್ಟಯ್ಯ! ಬಾ! ನನ್ನ ಕೈ ಹಿಡಿದುಕೋ. ಮಂಜನನ್ನ ಕಳೆದುಕೊಂಡು ಒಂಟಿಯಾದ ನನಗೆ ನಿನ್ನದೊಂದೇ ಆಸರೆ.

ಬೆಟ್ಟ—(ಮುಂದೆ ಬಂದು ಕೈ ನೀಡಲು ಅನುಮಾನಿಸುತ್ತಿರುವನು.) ಬುದ್ಧೀ!?

ರಾಯ—(ಅವನ ಕೈಯನ್ನು ಹಿಡಿದು) ಹೌದು ಬೆಟ್ಟಯ್ಯ, ನನ್ನ ಎಬ್ಬಿಸು. (ಮೇಲೆದ್ದು) ನಡೀ ನನ್ನನ್ನ ಕರೆದುಕೊಂಡು ಆ ತಬ್ಬಲಿ ಮಗುವಿನ ಬಳಿಗೆ ಸೇರಿಸಿಬಿಡು.

ಕಾಶಿ—ಸ್ವಾಮಿ! ಈ ಮನೆಯನ್ನ ಬಿಟ್ಟು, ಅಮ್ಮಾ ಅವರು, ರಾಜಕುಮಾರರು ಸಂಜೇ ಬರಬಹುದು. ಅವರನ್ನು ಬಿಟ್ಟು ತಾವು ಈ ರೀತಿ .....

ರಾಯ—ಕಾಶೀ ...ಈ ಮನೆ ನಿನ್ನದು. ಇಲ್ಲಿಗೆ ನೀನು ಯಜಮಾನ. ಅವರಿಗೆ ಅನ್ನವಿಕ್ಕಿ ಸಾಕೋನು ನೀನೆ. ಅವರು ಬಂದರೆ ತಿಳಿಸಿಬಿಡು........ ....ಬೆಟ್ಟ ನಡಿ. ವಸಂತನಂತಹ ಮಗನನ್ನ ಹೆತ್ತಿರುವ ಆ ತಾಯಿಯೇ ಪುಣ್ಯವಂತಳು.


(ತಟ್ಟಾಡುತ್ತಾ ನಿಷ್ಕ್ರಮಣ. ಕಾಶಿ ಬಾಯಿ ತೆರೆದು ನಿಂತಿರುವನು.

ಸಂಪೂರ್ಣ

ಟಿ. ಸದಾಶಿವಯ್ಯನವರ ಇತರ ಕೃತಿಗಳು

ಸೌಭಾಗ್ಯ	ನಾಟಕ)
ಮಕ್ಕಳೇ ದೇವರು	,,
ಸೊಂಪಿನ ಸಾಗರ	,,
ಭೀಮಸೇನ ಬೇಬಿ	,,
ಶಿವಾಜಿಯ ಬಾಲ್ಯ	,,
ಮೈಸೂರ ಮಾಣಿಕ್ಯ	,,
ಅಮ್ಮ	,,
ಶಿವಮಂಗಳ	,,
ಜಯ ಶ್ರೀ	,,
ಶಾ ಂ ತಿ	,,
ಕನ್ಯಾ ಸೆರೆ	,,
ಮಾಂಗಲ್ಯ	,,
ರ ಹ ಸ್ಯ	,,
ಸಿಂಹ (ಸ್ವಾತಂತ್ರ್ಯ ಘರ್ಜನೆ)	,,
ಬೃಂದಾವನ	,,
ಉಗಾದಿಯ ಸಡಗರ	,,
ರಾಮದರ್ಶನ	,,
ತಂಗಚ್ಚಿ	,,
ಆಮೇಲೆ	,,
ಏಕನಾಥ	(ಕಥೆಗಳು)
ಲೀಲೂಗಂಡ	,,
ಪ್ರ ತೀ ಕ್ಷೆ	,,
ಮೈಸೂರು ಹುಲಿ	,,
ಸ್ವಾಮಿ ರಾಮ ತೀರ್ಥ	(ಜೀವನ ಚರಿತ್ರೆ
ರಾಜಶ್ರೀ	(ಕಾದಂಬರಿ)

ಶ್ರೀ ಯೋಗಿನಾಥ್ ಪ್ರಿಂಟಿಂಗ್ ವರ್ಕ್ಸ್, ಚಾಮರಾಜಪೇಟೆ.



ಚಿ. ಸದಾಶಿವಯ್ಯನವರು

ಶ್ರೀ ಸದಾಶಿವಯ್ಯನವರ ಮೊದಲನೇ ನಾಟಕವಾದ “ಮೈಸೂರ ಮಾಣಿಕ್ಯ” ೧೯೨೭ರಲ್ಲಿ ಬೆಳಕಿಗೆ ಬಂದು ಅಂದಿನ ನಾಟಕಪ್ರೇಮಿಗಳ ಆದರಕ್ಕೆ ಪಾತ್ರವಾಗಿ ಮೆಚ್ಚುಕೆ ಪಡೆಯಿತು. ಆ ಉತ್ತೇಜನದಿಂದ ಪ್ರಾರಂಭವಾದ ಇವರ ನಾಟಕರಚನೆ ಇದುವರೆಗೂ ನಡೆಯುತ್ತಾ ಬಂದು, ಈ ವೇಳೆಗೆ ಸುಮಾರು ಇಪ್ಪತ್ತು ನಾಟಕಗಳನ್ನು ರಚಿಸಿ, ಆಡಿಸಿ ರಂಗಭೂಮಿಗೆ ಸೇವೆ ಸಲ್ಲಿಸಿದ್ದಾರೆ.

ಇವರ ನಾಟಕಗಳನ್ನು ಮದರಾಸು, ಬೊಂಬಾಯಿ, ಕಲ್ಕತ್ತ ಗಳಲ್ಲಿನ ಕನ್ನಡಿಗರು ಪ್ರೇಮದಿಂದ ಅಭಿನಯಿಸಿ ಅಲ್ಲಿ ನಾಟಕಪ್ರೇಮಿ ಗಳನ್ನು ತಣಿಸಿದ್ದಾರಲ್ಲದೆ, ಶ್ರೀ ಸದಾಶಿವಯ್ಯನವರೇ ಸ್ವತಃ ತಮ್ಮ ಗೆಳೆಯರೊಂದಿಗೂ ಮತ್ತು ಯುನೈಟೆಡ್ ಆರ್ಟಿಸ್ಟ್‌ರೊಂದಿಗೂ ಧಾರವಾಡ, ಹುಬ್ಬಳ್ಳಿ, ಗದಗ್, ಬೆಂಗಳೂರು, ಚಿಕ್ಕಮಗಳೂರು, ಚನ್ನಪಟ್ಣ, ಕೋಲಾರ, ತುಮಕೂರು ಮುಂತಾದ ಸ್ಥಳಗಳಲ್ಲೆಲ್ಲಾ ತಮ್ಮ ನಾಟಕಗಳನ್ನು ಅಭಿನಯಿಸಿ ಕೀರ್ತಿಗಳಿಸಿದ್ದಾರೆ. ಇವರ ಹತ್ತಾರು ನಾಟಕಗಳು ಮದ್ರಾಸು, ಮೈಸೂರು ರೇಡಿಯೋ ಕೇಂದ್ರ ಗಳಿಂದ ಪ್ರಸಾರವಾಗಿವೆ , ಆಗುತ್ತಿವೆ.

ಮಕ್ಕಳ (ಕಿರಿಯರ) ನಾಟಕಗಳನ್ನು ರಚಿಸುವುದರಲ್ಲಿ ಇವರಿಗೆ ಪ್ರೇಮ ಸದಾಶಿವಯ್ಯನವರು ತಮಗೆ ಸಹಜವಾದ ಲಲಿತ ಶೈಲಿ ಯಲ್ಲಿ ಅನೇಕ ಚಿಕ್ಕ ದೃಶ್ಯಗಳನ್ನು ಬರೆದು ಬಾಲಕವರ್ಗಕ್ಕೆ ಉಪ ಕಾರ ಮಾಡಿದ್ದಾರೆ.

ಆನಂದ್ ಬ್ರದರ್ಸ್ : : ಬೆಂಗಳೂರು ೨